**ಅಧ್ಯಾಯ-1**

[ಪ್ರಕರಣ 4[i][b][i]]

# ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ರಚನೆ, ಕಾರ್ಯಗಳು, ಕರ್ತವ್ಯಗಳ ವಿವರ

## ಪೀಠಿಕೆ

ಭಾರತ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೂಲಭೂತವಾಗಿ ನೀಡಬೇಕಾದ ಸೌಲಭ್ಯ ಹಾಗೂ ರಕ್ಷಣೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನೀಡಲು ಕರ್ನಾಟಕ ಸರ್ಕಾರವು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವನ್ನು ರಚಿಸಿದೆ. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯು ಅಮೂಲಾಗ್ರವಾಗಿ ಅಸ್ಪೃಶ್ಯತೆ ಆಚರಣೆಯಿಂದ ಈ ವರ್ಗದವರು ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕವಾಗಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ, ಸಂವಿಧಾನವನ್ನು ರಚಿಸಿದ ಗಣ್ಯ ವ್ಯಕ್ತಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ತೆಗೆದುಕೊಳ್ಳಲು ದೃಢವಾಗಿ ವಾದ ಮಂಡಿಸಿರುವುದಲ್ಲದೆ ಸಂವಿಧಾನದ ಅನುಚ್ಛೇದ 341 ಮತ್ತು 342ರಲ್ಲಿ ಅಳವಡಿಸಲಾಗಿದೆ. ಮೇಲೆ ತಿಳಿಸಿರುವ ಅಂಶಗಳ ಆಧಾರದ ಮೇಲೆ ರಾಜ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಆಯೋಗ ರಚಿಸಿದ್ದು, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಸರ್ವತೋಮುಖ ಅಭಿವೃದ್ಧಿ, ರಕ್ಷಣೆ ಮತ್ತು ತೀವ್ರ ರೀತಿಯ ಯೋಜನೆಗಳ ಅನುಷ್ಠಾನ, ಸರಿಸಮಾನ ಮೀಸಲಾತಿ, ಸರ್ಕಾರಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಉದ್ಯೋಗ ಮೀಸಲಾತಿ ಮತ್ತು ಚುನಾಯಿತ ಸರ್ಕಾರದ ನೀತಿ ನಿಯಮದಲ್ಲಿ ಭಾಗವಹಿಸಲು ಆಯೋಗವು ಸ್ಪಷ್ಟ ಗುರಿ ಮತ್ತು ನಿರ್ದೇಶನವನ್ನು ಹೊಂದಿರುತ್ತದೆ. ಈ ರೀತಿ ನೀಡಬೇಕಾದ ರಕ್ಷಣೆಗಳನ್ನು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳ ಅನುಚ್ಛೇದ 46 ರಲ್ಲಿ ಸ್ಪಷ್ಟವಾಗಿ ಅವಕಾಶ ಮಾಡಲಾಗಿದ್ದು, ಇದರಲ್ಲಿ ಅಭಿವೃದ್ಧಿ ಮತ್ತು ನಿಯಂತ್ರಿತ ಧೋರಣೆಗಳು ಸೇರಿರುತ್ತವೆ.

### ಅನುಚ್ಛೇದದ ವಿವರಣೆ ಈ ರೀತಿ ಇರುತ್ತದೆ

ರಾಜ್ಯ ಸರ್ಕಾರವು ಹಿಂದುಳಿದ ವರ್ಗದ ಜನರ ಅದರಲ್ಲಿಯೂ ಪರಿಶಿಷ್ಟ ಜಾತಿ/ವರ್ಗದವರ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ವಿಶೇಷ ಗಮನಹರಿಸಿ ಅಥವಾ ವಿಶೇಷ ಗಮನ ಹರಿಸಿ ಸಾಮಾಜಿಕ ನ್ಯಾಯ ಮತ್ತು ಇತರೆ ದೌರ್ಜನ್ಯಗಳಿಂದ ಪೂರ್ಣ ಮತ್ತು ನಿರ್ದಿಷ್ಟ ರಕ್ಷಣೆ ನೀಡುವುದು ಎಂದು ವ್ಯಾಖ್ಯಾನಿಸಲಾಗಿದೆ.

ರಾಜ್ಯದ ಕೆಲವೊಂದು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಸಂಘ ಸಂಸ್ಥೆಗಳ ಒತ್ತಾಯ ಮತ್ತು ಬೇಡಿಕೆಗಳನ್ನು ಪರಿಗಣಿಸಿ ರಾಷ್ಟ್ರೀಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಆಯೋಗದ ಮಾದರಿಯಲ್ಲಿಯೇ ಕರ್ನಾಟಕ ಸರ್ಕಾರವು ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ

ಬುಡಕಟ್ಟುಗಳ ಆಯೋಗವನ್ನು ಸರ್ಕಾರದ ಆದೇಶ ಸಂಖ್ಯೆ. ಎಸ್.ಡಬ್ಲ್ಯು.ಡಿ. 58 ಎಸ್.ಎಸ್.ಎನ್. 2001 ದಿನಾಂಕ: 10-10-2002ರ ಅಡಿಯಲ್ಲಿ ರಚಿಸಲಾಗಿದೆ. ಆಯೋಗವು ಅಧಿಕೃತವಾಗಿ ದಿನಾಂಕ: 10-04-2003 ರಿಂದ ನಂ. 14/3, ಸಿ.ಎಫ್.ಸಿ. ಕಟ್ಟಡ, 2ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

## ಆಯೋಗದ ರಚನೆ :

ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದಲ್ಲಿ ಒಬ್ಬರು ಅಧ್ಯಕ್ಷರು, ಇಬ್ಬರು ಅಧಿಕಾರೇತರ ಸದಸ್ಯರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಅಧ್ಯಕ್ಷರು ಮತ್ತು ಇಬ್ಬರು ಅಧಿಕಾರೇತರ ಸದಸ್ಯರ ಕಾಲಾವಧಿಯು ಮೂರು ವರ್ಷಗಳಿಗೆ ನಿಗಧಿಪಡಿಸಿದ್ದು ಈ ಅವಧಿಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರುಗಳು ಇಷ್ಟಪಟ್ಟಲ್ಲಿ ಸರ್ಕಾರಕ್ಕೆ ಲಿಖಿತ ಮೂಲಕ ರಾಜೀನಾಮೆ ಸಲ್ಲಿಸಬಹುದಾಗಿರುತ್ತದೆ.

ಆಯೋಗದಲ್ಲಿ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರು ಕಾರ್ಯ ನಿರ್ವಹಿಸಿರುತ್ತಾರೆ.

<u>ಅಧ್ಯಕ್ಷರು</u>

| | | | |
|---|---|---|---|
| 1. | ಶ್ರೀ ಆಂಜನಮೂರ್ತಿ, ಬಿ.ಎ. ಎಲ್.ಎಲ್.ಬಿ | ಅಧ್ಯಕ್ಷರು | 16-01-2003 ರಿಂದ 29-03-2004 |
| 2. | ಶ್ರೀ ನೆಹರು ಚ. ಓಲೇಕಾರ, ಎಂ.ಎ | ಅಧ್ಯಕ್ಷರು | 05-02-2007 ರಿಂದ 28-12-2012 |
| 3. | ಶ್ರೀ ಇ. ಅಶ್ವಥ್ ನಾರಾಯಣ, ಎಂ.ಎ | ಅಧ್ಯಕ್ಷರು | 29-12-2012 ರಿಂದ 24-11-2014 |
| 4. | ಶ್ರೀ ಬಸಣ್ಣ ಕೆ. ಚಲವಾದಿ, ಬಿ.ಎ.ಎಲ್.ಎಲ್.ಬಿ. (ಸ್ಪೆಷಲ್) | ಅಧ್ಯಕ್ಷರು | 25-11-2014 ರಿಂದ 24-08-2016 |
| 5. | ಶ್ರೀ ಎ. ಮುನಿಯಪ್ಪ | ಅಧ್ಯಕ್ಷರು | 03-11-2016 ರಿಂದ 29-05-2018 |
| 6. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ | ಅಧ್ಯಕ್ಷರು | 29-05-2018 ರಿಂದ 24-07-2018 |
| 7. | ಶ್ರೀ ಪ್ರಿಯಾಂಕ್ ಖರ್ಗೆ ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರು | ಅಧ್ಯಕ್ಷರು | 24-07-2018 ರಿಂದ 23-06-2019 |

| | | | |
|---|---|---|---|
| 8. | ಶ್ರೀ ಹೆಚ್.ಡಿ. ಅಮರನಾಥನ್ ,ಬಿ.ಎಸ್ಸಿ ಎಲ್.ಎಲ್.ಬಿ. | ಅಧ್ಯಕ್ಷರು | 24-06-2019 ರಿಂದ 30-07-2019 |
| 9. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ | ಅಧ್ಯಕ್ಷರು | 30-07-2019 ರಿಂದ 12.08-2020 |
| 10. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ | ಅಧ್ಯಕ್ಷರು | 12.-08-2020 ರಿಂದ 06-12-2020 |
| 11. | ಶ್ರೀ ನೆಹರು ಚ.ಓಲೇಕಾರ ಎಂ.ಎ | ಅಧ್ಯಕ್ಷರು | 07-12-2020 ರಿಂದ 23-05-2023 |

## ಸದಸ್ಯರು

| | | | |
|---|---|---|---|
| 1. | ಶ್ರೀ ಕೆ.ಆರ್. ಈಶ್ವರನಾಯ್ಕ | ಸದಸ್ಯರು | 2003-2006 |
| 2. | ಶ್ರೀ ಬಸವರಾಜ ಚಿಂಚೋಳಿ | ಸದಸ್ಯರು | 2003-2006 |
| 3. | ಶ್ರೀ ಎಂ. ಕುಂಬಯ್ಯ ಎಂ.ಎ ಎಲ್ ಎಲ್ ಬಿ | ಸದಸ್ಯರು | 2007-2010 |
| 4. | ಶ್ರೀ ಸತ್ಯೇಂದ್ರ ಕುಮಾರ್ ಬಿ.ಎ ಎಲ್ ಎಲ್ ಬಿ | ಸದಸ್ಯರು | 2011-2014 |
| 5. | ಶ್ರೀಮತಿ ಶಾರದಾ ಹಾವನೂರು | ಸದಸ್ಯರು | 2011-2013 |
| 6. | ಶ್ರೀ ಎಂ. ಕುಂಬಯ್ಯ ಎಂ.ಎ ಎಲ್ ಎಲ್ ಬಿ | ಸದಸ್ಯರು | 11-04-2016 ರಿಂದ 17-03-2017 |
| 7. | ಶ್ರೀ ಎನ್. ದಿವಾಕರ್ ಎಂ.ಎ ಎಲ್ ಎಲ್ ಎಂ | ಸದಸ್ಯರು | 11-04-2016 ರಿಂದ 30-11-2017 |
| 8. | ಶ್ರೀ ಆನಂದ ಲ. ಸಂದ್ರಿಮನಿ | ಸದಸ್ಯರು | 17-03-2017 ರಿಂದ02-06-2018 |
| 9. | ಶ್ರೀ ಸುಬ್ರಮಣಿ ವೈ | ಸದಸ್ಯರು | 30-11-2017 ರಿಂದ 02-06-2018 |
| 10. | ಶ್ರೀ ಹೆಚ್.ವೆಂಕಟೇಶ ದೊಡ್ಡೇರಿ ಎಂ.ಎ ಎಲ್ ಎಲ್ ಬಿ | ಸದಸ್ಯರು | 11-02-2021 ರಿಂದ 23-05-2023 |
| 11. | ಶ್ರೀ ಜಿ.ಪಿ ಜಯಪಾಲಯ್ಯ | ಸದಸ್ಯರು | 17-02-2021 ರಿಂದ 23-05-2023 |

ಆಯೋಗದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಡಾ|| ರಾಕೇಶ್ ಕುಮಾರ್, ಭಾ.ಆ.ಸೇ. ರವರು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರು ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆಯ ಒಬ್ಬರು ಜಂಟಿ ನಿರ್ದೇಶಕರು ಆಯೋಗದ ಕಾರ್ಯದರ್ಶಿಯಾಗಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುತ್ತಾರೆ.

**ಆಯೋಗದ ಅಧಿಕಾರಿ ಹಾಗೂ ಸಿಬ್ಬಂದಿ ಮಂಜೂರಾತಿ ಸಂಖ್ಯೆ ಈ ಕೆಳಗಿನಂತಿದೆ** :

| ಕ್ರ. ಸಂ. | ಹುದ್ದೆಯ ಪದನಾಮ | ಒಟ್ಟು ಮಂಜೂರಾದ ಹುದ್ದೆಗಳು | ವೇತನ ಶ್ರೇಣಿ |
|---|---|---|---|
| 1. | ಕಾರ್ಯದರ್ಶಿ | 1 | 74400-109600 |
| 2. | ಸಂಶೋಧನಾಧಿಕಾರಿ | 1 | 67500-104600 |
| 3. | ಸಹಾಯಕ ನಿರ್ದೇಶಕರು (ಗ್ರೇಡ್-1) | 2 | 52650-97100 |
| 4. | ಅಧ್ಯಕ್ಷರ ಆಪ್ತ ಕಾರ್ಯದರ್ಶಿ (ಗ್ರೇಡ್-2) | 1 | 43100-83900 |
| 5. | ಕಛೇರಿ ಅಧೀಕ್ಷಕರು | 1 | 37900-70850 |
| 6. | ಸಹಾಯಕ ಸಾಂಖ್ಯಿಕ ಅಧಿಕಾರಿ | 1 | 37900-70850 |
| 7. | ತನಿಖಾ ಸಹಾಯಕರು | 3 | 37900-70850 |
| 8. | ಪ್ರಥಮ ದರ್ಜೆ ಸಹಾಯಕರು | 5 | 27650-52650 |
| 9. | ಶೀಘ್ರಲಿಪಿಗಾರರು | 4 | 27650-52650 |
| 10. | ದ್ವಿತೀಯ ದರ್ಜೆ ಸಹಾಯಕರು | 4 | 21400-42000 |
| 11. | ಬೆರಳಚ್ಚುಗಾರರು | 1 | 21400-42000 |
| 12. | ವಾಹನ ಚಾಲಕರು | 2 | 21400-42000 |
| 13. | "ಡಿ" ಗ್ರೂಪ್ | 4 | 18600-32600 |
| | ಒಟ್ಟು | 30 | |

## ಅಧಿಸೂಚನೆ

**ಕರ್ನಾಟಕ ರಾಜ್ಯ ಪತ್ರ ಭಾಗ-IV-A ನಲ್ಲಿ ದಿನಾಂಕ ಸೆಪ್ಟಂಬರ್ 11, 2002 ರಲ್ಲಿ ಆಯೋಗವನ್ನು ರಚಿಸಿದ ಬಗ್ಗೆ ಹೊರಡಿಸಿರುವ ಯಥಾವತ್ತು ಪ್ರಕಟಣೆಯ ವಿಶೇಷ ಪತ್ರಿಕೆ**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 58 ಶಾಸನ 2001, ಬೆಂಗಳೂರು, ದಿನಾಂಕ 11 ಸೆಪ್ಟಂಬರ್ 2002

ಕರ್ನಾಟಕ ರಾಜ್ಯದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಅಧಿನಿಯಮ 2002ಕ್ಕೆ 2002ರ ಸೆಪ್ಟಂಬರ್ 6ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆ ಇದನ್ನು 2002ರ ಕರ್ನಾಟಕ ಅಧಿನಿಯಮ ಸಂಖ್ಯೆ 20 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2002ರ ಕರ್ನಾಟಕ ಅಧಿನಿಯಮ ಸಂಖ್ಯೆ 20

**(2002ರ ಸೆಪ್ಟೆಂಬರ್ ಹನ್ನೊಂದನೆಯ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಅಧಿನಿಯಮ, 2002** (2002ರ ಸೆಪ್ಟೆಂಬರ್ 6ನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳಿಗಾಗಿ ಅನುಮತಿಯನ್ನು ಕಲ್ಪಿಸಲು ಒಂದು ಅಧಿನಿಯಮ.

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವನ್ನು ರಚಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ; ಇದು ಭಾರತ ಗಣರಾಜ್ಯದ ಐವತ್ತೂರನೆಯ ವರ್ಷದಲ್ಲಿ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.

## ಅಧ್ಯಾಯ -1

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಪ್ರಾರಂಭ:-**

1. ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಅಧಿನಿಯಮ 2002 ಎಂದು ಕರೆಯತಕ್ಕದ್ದು.

2. ಇದು 2002ರ ಜನವರಿ 5ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು** : ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು :

ಎ. "ಆಯೋಗ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ.

ಬಿ. "ಸದಸ್ಯ" ಎಂದರೆ, ಆಯೋಗದ ಒಬ್ಬ ಸದಸ್ಯ.

ಸಿ. "ಅನುಸೂಚಿತ ಜಾತಿಗಳು" ಎಂಬುದು, ಭಾರತ ಸಂವಿಧಾನದ 366ನೇ ಅನುಚ್ಛೇದದ (24)ನೇ ಖಂಡದಲ್ಲಿ ಕೊಡಲಾದ ಅರ್ಥವನ್ನು ಹೊಂದಿರತಕ್ಕದ್ದು.

ಡಿ. "ಅನುಸೂಚಿತ ಬುಡಕಟ್ಟುಗಳು" ಎಂಬುದು ಭಾರತ ಸಂವಿಧಾನದ 366ನೇ ಅನುಚ್ಛೇದದ (25)ನೇ ಖಂಡದಲ್ಲಿ ಕೊಡಲಾದ ಅರ್ಥವನ್ನು ಹೊಂದಿರತಕ್ಕದ್ದು.

## ಅಧ್ಯಾಯ -II

## ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಆಯೋಗ

**3. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ರಚನೆ :**

(1) ರಾಜ್ಯ ಸರ್ಕಾರವು, ಈ ಅಧಿನಿಯಮದ ಪ್ರಾರಂಭದ ತರುವಾಯ ಸಾಧ್ಯವಾದಷ್ಟು ಬೇಗನೆ ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ವಹಿಸಿಕೊಡಲಾದ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು, ಬೆಂಗಳೂರಿನಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿರುವ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಎಂದು ಕರೆಯಲಾಗುವ ಒಂದು ನಿಕಾಯವನ್ನು ರಚಿಸತಕ್ಕದ್ದು.

(2) ಆಯೋಗವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು ಎಂದರೆ :-

ಎ. ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನವುಳ್ಳ ಒಬ್ಬ ಅಧ್ಯಕ್ಷ

ಬಿ. ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿಶೇಷ ಜ್ಞಾನವುಳ್ಳ ಇಬ್ಬರು ವ್ಯಕ್ತಿಗಳು.

ಸಿ. ಆಯುಕ್ತರು, ಸಮಾಜ ಕಲ್ಯಾಣ ಅಥವಾ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ- ಇವರು ಅನುಕ್ರಮವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ವಿಷಯಗಳಿಗೆ ಸಂಬಂಧಿಸಿದಂತೆ ಆಯೋಗದ ಸದಸ್ಯ ಕಾರ್ಯದರ್ಶಿಗಳಾಗಿರತಕ್ಕದ್ದು.

**4. ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು :-**

1. ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು, ಮೂರು ವರ್ಷಗಳನ್ನು ಮೀರದಂತೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅವಧಿಯವರೆಗೆ ಪದಧಾರಣೆ ಮಾಡತಕ್ಕದ್ದು.

2. ಆಯೋಗದ ಅಧ್ಯಕ್ಷನು ಅಥವಾ ಸದಸ್ಯರು ತನ್ನ ಸಹಿಯಿಂದ ಕೂಡಿದ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿ ಯಾವುದೇ ಸಮಯದಲ್ಲಿ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

3. ಈ ಮುಂದಿನ ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಅಧ್ಯಕ್ಷನು ಅಥವಾ ಸದಸ್ಯನ ಪದದಿಂದ ತೆಗೆದುಹಾಕತಕ್ಕದ್ದು.

ಎ. ಅವನು ಅಮುಕ್ತ ದಿವಾಳಿಯಾದರೆ ಅಥವಾ

ಬಿ. ಅವು ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾಗೃಹವಾಸದ ಶಿಕ್ಷೆಗೆ ಒಳಗಾಗಿದ್ದರೆ ಅಥವಾ

ಸಿ. ಅವನು ಅಸ್ವಸ್ಥ ಚಿತ್ತದವನಾದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದ್ದರೆ, ಅಥವಾ

ಡಿ. ಅವನು ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ, ಅಥವಾ

ಇ. ಅವನು ಆಯೋಗದಿಂದ ಗೈರು ಹಾಜರಾಗುವುದಕ್ಕೆ ಅನುಮತಿಯನ್ನು ಪಡೆದುಕೊಳ್ಳದೆ ಆಯೋಗದ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದರೆ, ಅಥವಾ

ಎಫ್. ಅವನು ಪದದಲ್ಲಿ ಮುಂದುವರಿಯುವುದರಿಂದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿತಾಸಕ್ತಿಗೆ ಬಾಧಕವಾಗುವ ಅಂಥ ರೀತಿಯಲ್ಲಿ ಅಧ್ಯಕ್ಷನ ಅಥವಾ ಸದಸ್ಯ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿರುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ.

ಪರಂತು, ಯಾವೊಬ್ಬ ವ್ಯಕ್ತಿಗೆ ಈ ವಿಚಾರದಲ್ಲಿ ಅಹವಾಲು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶಕೊಟ್ಟ ಹೊರತು ಈ ಖಂಡದ ಅಡಿಯಲ್ಲಿ ಅವನನ್ನು ತೆಗೆದು ಹಾಕತಕ್ಕದ್ದಲ್ಲ.

4. (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಥವಾ ಅನ್ಯಥಾ ರಿಕ್ತತೆಯುಂಟಾದಲ್ಲಿ ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ಅದನ್ನು ತುಂಬತಕ್ಕದ್ದು.

5. ಅಧ್ಯಕ್ಷನಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಮತ್ತು ಇತರೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**5. ಆಯೋಗದ ಸಿಬ್ಬಂದಿ:-**

(1) ರಾಜ್ಯ ಸರ್ಕಾರವು ಆಯೋಗದ ಪ್ರಕಾರ್ಯಗಳ ಸೂಕ್ತ ನಿರ್ವಹಣೆಗೆ ಅವಶ್ಯಕವಾಗಬಹುದಾದ ಅಂಥ ಅಧಿಕಾರಿಗಳು ಮತ್ತು ನೌಕರರನ್ನು ಆಯೋಗಕ್ಕೆ ಒದಗಿಸತಕ್ಕದ್ದು.

(2) ಆಯೋಗದ ಅಧ್ಯಕ್ಷರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳನ್ನು ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಭತ್ಯೆಗಳು ಹಾಗೂ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳೂ ಒಳಗೊಂಡಂತೆ ಆಡಳಿತ ವೆಚ್ಚಗಳನ್ನು 11ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

**6. ರಿಕ್ತತೆಗಳು ಮುಂತಾದವುಗಳು ಆಯೋಗದ ವಿವರಣೆಗಳನ್ನು ಅನೂರ್ಜಿತಗೊಳಿಸತಕ್ಕದಲ್ಲ :**

ಆಯೋಗದ ಯಾವುದೇ ಕೃತ್ಯ ಅಥವಾ ವ್ಯವಹರಣೆಗಳು ಆಯೋಗದಲ್ಲಿನ ಯಾವುದೇ ರಿಕ್ತತೆ ಇರುವ ಅಥವಾ ಆಯೋಗದ ರಚನೆಯಲ್ಲಿ ಯಾವುದೇ ನ್ಯೂನತೆ ಇರುವ ಕಾರಣ ಮಾತ್ರದಿಂದಲೇ ಅನೂರ್ಜಿತವಾಗತಕ್ಕದ್ದಲ್ಲ.

7. **ಆಯೋಗವು ಕಾರ್ಯವಿಧಾನವನ್ನು ನಿಯಂತ್ರಿಸುವುದು :-**

1. ಆಯೋಗವು, ಅವಶ್ಯಕವಾದಾಗಲೆಲ್ಲಾ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಮತ್ತು ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು.
2. ಆಯೋಗವು ತನ್ನ ಕಾರ್ಯವಿಧಾನವನ್ನು ನಿಯಂತ್ರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.
3. ಆಯೋಗದ ಎಲ್ಲಾ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ-ಕಾರ್ಯದರ್ಶಿ ಅಥವಾ ಸದಸ್ಯ ಕಾರ್ಯದರ್ಶಿಯು ಈ ಪರವಾಗಿ ಸೂಕ್ತವಾಗಿ ಪ್ರಾಧೀಕರಿಸಿದ ಆಯೋಗದ ಇತರ ಯಾವೊಬ್ಬ ಅಧಿಕಾರಿಯು ಅಧಿಪ್ರಮಾಣಿಸತಕ್ಕದ್ದು.

## ಅಧ್ಯಾಯ - III

## ಆಯೋಗದ ಪ್ರಕಾರ್ಯಗಳು ಹಾಗೂ ಅಧಿಕಾರಗಳು

8. **ಆಯೋಗದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು ಎಂದರೆ :-**

ಎ. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಮತ್ತು ಸಂರಕ್ಷಣೆಗಾಗಿ ಭಾರತ ಸಂವಿಧಾನದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಸರ್ಕಾರದ ಯಾವುದೇ ಆದೇಶದ ಅಡಿಯಲ್ಲಿ ಉಪಬಂಧಿಸಲಾದ ವಿವಿಧ ರಕ್ಷಾಕ್ರಮಗಳ ಕಾರ್ಯಕ್ಷಮತೆಯನ್ನು ಪರಿಶೋಧಿಸುವುದು ಮತ್ತು ಪರೀಕ್ಷಿಸುವುದು ಮತ್ತು

ಬಿ. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿರುವವರನ್ನು ಅವರ ಹಕ್ಕುಗಳಿಂದ ಮತ್ತು ಸಂರಕ್ಷಣೆಯಿಂದ ವಂಚಿತಗೊಳಿಸಿರುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ದೂರುಗಳನ್ನು ವಿಚಾರಿಸುವುದು ಮತ್ತು ಅಂತಹ ವಿಷಯದ ಬಗ್ಗೆ ಸೂಕ್ತ ಪ್ರಾಧಿಕಾರಗಳನ್ನು ಸಂಪರ್ಕಿಸುವುದು.

ಸಿ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಾಮಾಜಿಕ - ಆರ್ಥಿಕ ಅಭಿವೃದ್ಧಿಯ ಯೋಜನೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಈ ಬಗ್ಗೆ ಸಲಹೆಗಳನ್ನು ನೀಡುವುದು ಮತ್ತು ರಾಜ್ಯದಲ್ಲಿ ಅವರ ಅಭಿವೃದ್ಧಿಯಲ್ಲಾದ ಪ್ರಗತಿಯ ಮೌಲ್ಯನಿರ್ಣಯ ಮಾಡುವುದು.

ಡಿ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ರಕ್ಷಾಕ್ರಮಗಳನ್ನು ಮತ್ತು ಇತರೆ ಕ್ರಮಗಳನ್ನು

ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುವುದು ಮತ್ತು ವಾರ್ಷಿಕವಾಗಿ ಮತ್ತು ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರೆ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಇ. ನಿಯಮಿಸಬಹುದಾದಂತೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ, ಅಭಿವೃದ್ಧಿ ಮತ್ತು ಪ್ರಗತಿಗೆ ಸಂಬಂಧಪಟ್ಟಂತೆ ಅಂಥ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುವುದು.

ಪರಂತು, ಈ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ವಿಷಯದ ಬಗ್ಗೆ ಭಾರತ ಸಂವಿಧಾನ 338ನೇ ಅನುಚ್ಛೇದದ ಅಡಿಯಲ್ಲಿ ಸ್ಥಾಪಿಸಲಾದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ರಾಷ್ಟ್ರೀಯ ಆಯೋಗವು ವ್ಯವಹರಿಸುತ್ತಿದ್ದರೆ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಆಯೋಗವು ಅಂಥ ವಿಷಯದ ಮೇಲೆ ಅಧಿಕಾರದ ವ್ಯಾಪ್ತಿಯನ್ನು ಹೊಂದಿರುವುದು ನಿಂತು ಹೋಗತಕ್ಕದ್ದು.

**9. ವರದಿ ಮಂಡನೆ:-** ರಾಜ್ಯ ಸರ್ಕಾರವು 8ನೇ ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಿದ ಅಂಥ ವರದಿಗಳನ್ನು ಕೈಗೊಂಡ ಕ್ರಮದ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಕ್ರಮದ ಬಗ್ಗೆ ಮತ್ತು ಶಿಫಾರಸ್ಸುಗಳನ್ನು ಒಪ್ಪಿಸಿಕೊಳ್ಳದಿರುವುದಕ್ಕೆ ಯಾವುದೇ ಕಾರಣಗಳಿದ್ದರೆ ಅವುಗಳ ಬಗ್ಗೆ ವಿವರಣೆ ನೀಡಿ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದಸ್ಯನ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**10. ಆಯೋಗದ ಅಧಿಕಾರಗಳು :**

ಆಯೋಗವು 8ನೇ ಪ್ರಕರಣದ ಅಡಿಯಲ್ಲಿನ ಯಾವುದೇ ವಿಷಯದ ತನಿಖೆ ನಡೆಸುವಾಗ, ಸಿವಿಲ್ ನ್ಯಾಯಾಲಯವು ಒಂದು ದಾವೆಯ ಅಧಿವಿಚಾರಣೆ ಮತ್ತು ಅದರಲ್ಲೂ ವಿಶೇಷವಾಗಿ ಈ ಕೆಳಗಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ

ಎ. ಯಾವೊಬ್ಬ ವ್ಯಕ್ತಿಯನ್ನು ರಾಜ್ಯದ ಯಾವುದೇ ಭಾಗದಿಂದ ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಅವನನ್ನು ಪ್ರಮಾಣಮಾಡಿಸಿ ವಿಚಾರಣೆ ನಡೆಸುವುದು.

ಬಿ. ಯಾವುದೇ ದಸ್ತಾವೇಜನ್ನು ಮಾಡುವುದು ಮತ್ತು ಹಾಜರು ಪಡಿಸುವಂತೆ ಅಗತ್ಯಪಡಿಸುವುದು.

ಸಿ. ಅಫಿಡವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು.

ಡಿ. ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕೋರುವುದು.

ಇ. ಸಾಕ್ಷ್ಯಗಳ ಮತ್ತು ದಸ್ತಾವೇಜುಗಳ ವಿಚಾರಣೆಗಾಗಿ ಕಮೀಷನ್ಗಳನ್ನು ಹೊರಡಿಸುವುದು, ಮತ್ತು

ಎಫ್. ನಿಯಮಿಸಬಹುದಾದ ಯಾವುದೇ ಇತರೆ ವಿಷಯ

## ಅಧ್ಯಾಯ - IV

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

### 11. ರಾಜ್ಯ ಸರ್ಕಾರದಿಂದ ಅನುದಾನಗಳು

1. ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸಲು ರಾಜ್ಯ ಸರ್ಕಾರವು ಯುಕ್ತವೆಂದು ಭಾವಿಸುವಂಥ ಹಣದ ಮೊತ್ತವನ್ನು ಈ ಸಂಬಂಧದಲ್ಲಿ ಕಾನೂನಿನ ಮೂಲಕ ರಾಜ್ಯ ವಿಧಾನ ಮಂಡಲವು ಸೂಕ್ತ ಧನವಿನಿಯೋಗ ಮಾಡಿದ ನಂತರ ರಾಜ್ಯ ಸರ್ಕಾರವು ಅನುದಾನಗಳ ಮೂಲಕ ಆಯೋಗಕ್ಕೆ ನೀಡತಕ್ಕದ್ದು.

2. ಆಯೋಗವು ಈ ಅಧಿನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನೆರವೇರಿಸಲು ಅನುದಾನಗಳ ಪೈಕಿಯಿಂದ ತಾನು ಸೂಕ್ತವೆಂದು ಭಾವಿಸುವ ಅಂಥ ಮೊತ್ತವನ್ನು ಖರ್ಚುಮಾಡಬಹುದು ಮತ್ತು ಅಂಥ ಮೊತ್ತಗಳನ್ನು (1)ನೇಉಪಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

### 12. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

1. ಆಯೋಗದ ಆದಾಯ ಮತ್ತು ವೆಚ್ಚಗಳನ್ನು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ಲೆಕ್ಕ ಇಡತಕ್ಕದ್ದು.

2. ಆಯೋಗವು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರವನ್ನು ತಯಾರಿಸತಕ್ಕದ್ದು.

3. ಆಯೋಗದ ಲೆಕ್ಕ ಪತ್ರಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡಬಹುದಾದ ಅಂಥ ಲೆಕ್ಕ ಪರಿಶೋಧಕನು ವಾರ್ಷಿಕವಾಗಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

4. ಲೆಕ್ಕ ಪರಿಶೋಧಕನಿಗೆ, ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಆಯೋಗದ ಎಲ್ಲಾ ಲೆಕ್ಕಪತ್ರಗಳನ್ನು ಮತ್ತು ಇತರೆ ದಾಖಲೆಗಳನ್ನು ಪಡೆಯಲು ಅವಕಾಶವಿರತಕ್ಕದ್ದು.

5. ಆಯೋಗದ ಈ ಅನುದಾನದಿಂದ ನಿಯಮಿಸಬಹುದಾದಂತೆ ಲೆಕ್ಕ ಪರಿಶೋಧನೆಯ ಅಂಥ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.

6. ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ, ಆಯೋಗವು ಲೆಕ್ಕಪತ್ರಗಳ ವಾರ್ಷಿಕ ವಿವರವನ್ನು ಲೆಕ್ಕಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಲೆಕ್ಕ ಪತ್ರಗಳ ವಾರ್ಷಿಕ ವಿವರಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

7. ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

8. ರಾಜ್ಯ ಸರ್ಕಾರವು ಲೆಕ್ಕ ಪರಿಶೋಧಕನ ವರದಿಯನ್ನು ಅವಗಾಹಿಸಿದ ಉಚಿತವೆಂದು ಭಾವಿಸುವಂಥ ನಿರ್ದೇಶನಗಳನ್ನು ಆಯೋಗಕ್ಕೆ ನೀಡಬಹುದು ಮತ್ತು ಆಯೋಗವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ – V

## ಸಂಕೀರ್ಣ

**13. ಆಯೋಗದ ಅಧ್ಯಕ್ಷ, ಸದಸ್ಯರು ಮತ್ತು ನೌಕರರು ಲೋಕ ನೌಕರರಾಗಿರತಕ್ಕದ್ದು -**

ಆಯೋಗದ ಅಧ್ಯಕ್ಷ, ಸದಸ್ಯರು ಮತ್ತು ನೌಕರರನ್ನು ಭಾರತ ದಂಡ ಸಂಹಿತೆಯ [1860 ರ ಕೇಂದ್ರಾಧಿನಿಯಮ 45] 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂಬುದಾಗಿ ಭಾವಿಸತಕ್ಕದ್ದು.

**14. ನಿಯಮಗಳ ರಚನಾಧಿಕಾರ**

1. ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

2. ವಿಶೇಷವಾಗಿ ಮತ್ತು ಮೇಲೆ ತಿಳಿಸಿದ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ :-

ಎ. 4ನೇ ಪ್ರಕರಣದ (5)ನೇ ಉಪ ಪ್ರಕರಣದ ಅಡಿಯಲ್ಲಿ ಅಧ್ಯಕ್ಷರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಹಾಗೂ ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಭತ್ಯೆಗಳು

ಬಿ. 12ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ತಯಾರಿಸತಕ್ಕ ಲೆಕ್ಕಪತ್ರಗಳ ವಾರ್ಷಿಕ ವಿವರದ ನಮೂನೆ.

ಸಿ. ನಿಯಮಿಸಬೇಕೆಂದು ಅಗತ್ಯಪಡಿಸಲಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

3. ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನದ ಅಥವಾ ನಿಕಟ ತರುವಾಯದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಈ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದಲ್ಲ.

**15. ತೊಂದರೆಗಳನ್ನು ನಿವಾರಿಸಲು ಅಧಿಕಾರ:-**

1. ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಅಂಥ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ, ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತನಗೆ ಅಗತ್ಯವೆಂದು ಅಥವಾ ಸೂಕ್ತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು.

ಪರಂತು, ಈ ಅಧಿನಿಯಮದ ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಆದೇಶವನ್ನು ಹೊರಡಿಸತಕ್ಕದಲ್ಲ.

2. ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**16. ನಿರಸನ ಮತ್ತು ಉಳಿಸುವಿಕೆಗಳು :**

1. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಆಧ್ಯಾದೇಶ 2001ನ್ನು (2001ರ ಕರ್ನಾಟಕ ಆಧ್ಯಾದೇಶ 8) ಈ ಮೂಲಕ ನಿರಸನಗೊಳಿಸಲಾಗಿದೆ.

2. ಹಾಗೆ ನಿರಸನಗೊಂಡಿದ್ದಾಗ್ಯೂ ಸದರಿ ಆಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಲ್ಲಿ

ಮ.ರಾ. ಹೆಗಡೆ

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

# ಕರ್ನಾಟಕ ಸರ್ಕಾರ

# ಸಮಾಜ ಕಲ್ಯಾಣ ಸಚಿವಾಲಯ

ಸಂಖ್ಯೆ: ಎಸ್ಡಬ್ಲ್ಯೂಡಿ 199 ಎಸ್ಎಡಿ 2010 ಬೆಂಗಳೂರು, ದಿನಾಂಕ 21-11-2012.

## ಅಧಿಸೂಚನೆ

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗದ ನಿಯಮಗಳು, 2011ರ ಕರಡನ್ನು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅಧಿನಿಯಮ, 2002 (ಕರ್ನಾಟಕ ಅಧಿನಿಯಮ ಸಂಖ್ಯೆ 2002ರ 20)ರ 14ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ ಎಸ್ಡಬ್ಲ್ಯುಡಿ 199 ಎಸ್ಎಡಿ 2010 ದಿನಾಂಕ 16-06-2011ನ್ನು ಕರ್ನಾಟಕ ರಾಜ್ಯಪತ್ರ ದಿನಾಂಕ 14-07-2011ರ ಭಾಗ IVಎ ರಲ್ಲಿ ಇದರಿಂದ ಭಾದಿತರಾಗುವ ಎಲ್ಲ ವ್ಯಕ್ತಿಗಳಿಂದ ಇದನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು 14-07-2011ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ಪತ್ರಕ್ಕೆ ಸಂಬಂಧಪಟ್ಟಂತೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗದ ಅಧಿನಿಯಮ, 2002 (ಕರ್ನಾಟಕ ಅಧಿನಿಯಮ, 2002ರ 20)ರ 14ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ :-

## ನಿಯಮಗಳು

1. **ಹೆಸರು ಮತ್ತು ಪ್ರಾರಂಭ**: (1) ಈ ನಿಯಮಗಳನ್ನು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗದ ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆ** : ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು-

1) "ಅಧಿನಿಯಮ" ಎಂದರೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗದ ಅಧಿನಿಯಮ, 2002 (ಕರ್ನಾಟಕ ಅಧಿನಿಯಮ, 2002ರ 20);

2) "ಅಧ್ಯಕ್ಷ" ಎಂದರೆ ಅಧಿನಿಯಮದ ೩ನೇ ಪ್ರಕರಣದ ೨(ಎ) ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ನಾಮ ನಿರ್ದೇಶಿಸಿದ ಆಯೋಗದ ಅಧ್ಯಕ್ಷ;

3) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

4) "ಆಯೋಗ" ಎಂದರೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗ;

5) "ಸದಸ್ಯ" ಎಂದರೆ ಯುಕ್ತವಾಗಿ ನೇಮಕಗೊಂಡ ಆಯೋಗದ ಸದಸ್ಯ;

6) ಅನುಸೂಚಿತ ಜಾತಿಗಳು ಮತ್ತು ಪಂಗಡಗಳು ಎಂಬ "ವ್ಯಾಖ್ಯಾನವು" ಭಾರತ ಸಂವಿಧಾನದ ೩೬೬ನೇ ಅನುಚ್ಛೇದ 24 ಮತ್ತು ೨೫ನೇ ಖಂಡಗಳಲ್ಲಿ ಇವುಗಳಿಗೆ ಕ್ರಮವಾಗಿ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ-II

**೩. ಆಯೋಗದ ಅಧ್ಯಕ್ಷ, ಸದಸ್ಯರ ವೇತನ ಮತ್ತು ಭತ್ಯೆಗಳು :-**

1) ಸರ್ಕಾರವು, ಅಧ್ಯಕ್ಷರಿಗೆ ನೀಡಿದ ಸ್ಥಾನಮಾನಗಳಿಗನುಸಾರವಾಗಿ ವೇತನ ಮತ್ತು ಭತ್ಯೆಗಳು ಮತ್ತು ಇತರ ವಿಶೇಷ ಸೌಲಭ್ಯಗಳಿಗೆ ಹಕ್ಕುಳ್ಳವರಾಗಿರುತ್ತಾರೆ. ಅಧ್ಯಕ್ಷರು ಕರ್ನಾಟಕ ರಾಜ್ಯದ ವಿಧಾನಮಂಡಲದ ಸದಸ್ಯರಾಗಿದ್ದರೆ, ಅವರ ಸಂಬಂಧಪಟ್ಟ ಅಧಿನಿಯಮ/ನಿಯಮಗಳ ಮೇರೆಗೆ ವಿಧಾನ ಮಂಡಲದ ಸದಸ್ಯರಾಗಿ ಪಡೆಯುವ ಭತ್ಯೆಗಳನ್ನು ಹೊರತುಪಡಿಸಿ ಯಾವುದೇ ಇತರ ಪರಿಶ್ರಮ ಧನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಸರ್ಕಾರದಿಂದ ಅಥವಾ ಹಿಂದಿನ ಸೇವೆಗೆ ಸಂಬಂಧಿಸಿದಂತೆ ನಿವೃತ್ತಿ ವೇತನವನ್ನು ಪಡೆಯುವಂಥ ಯಾರೇ ವ್ಯಕ್ತಿಯನ್ನು ಅಧ್ಯಕ್ಷ ಎಂದು ನೇಮಕ ಮಾಡಿರುವಾಗ ಈ ನಿಯಮಗಳ ಮೇರೆಗೆ ಅವನಿಗೆ ಅನ್ವಯವಾಗುವ ವೇತನವು ಆ ನಿವೃತ್ತಿ ವೇತನದ ಮೊಬಲಗಿಗಿಂತ ಕಡಿಮೆ ಇರತಕ್ಕದ್ದು.

2) ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ ಸದಸ್ಯರು, ಈ ಮುಂದಿನ ಉಪವೇಶನ ಸಂಭಾವನೆ ಮತ್ತು ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು, ಎಂದರೆ :-

ಎ) ಆಯೋಗದ ಪ್ರತಿಉಪವೇಶನ / ಸಭೆಯ ಉಪವೇಶನದ ಸಂಭಾವನೆಯು ರೂ. 1000/- ಆಗಿದ್ದು ಇದು ತಿಂಗಳಿಗೆ ರೂ. ೨೦,೦೦೦/- ಮೀರತಕ್ಕದ್ದಲ್ಲ.

ಬಿ) ಸ್ಥಳೀಯ ಪ್ರಯಾಣವೆಚ್ಚ, ದೂರವಾಣಿ, ಇತರ ವೆಚ್ಚಗಳಿಗಾಗಿ ಮಾಸಿಕ ಭತ್ಯೆಗಳು ರೂ. ೫೦೦೦/- (ಐದು ಸಾವಿರ ರೂಗಳು ಮಾತ್ರ)

ಸಿ) ರಾಜ್ಯ ಸರ್ಕಾರದ ಹಿರಿಯ ದರ್ಜೆ 'ಎ' ಸಮೂಹದ ಅಧಿಕಾರಿಗೆ ಅನ್ವಯವಾಗುವಂಥ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ, ಸದಸ್ಯರುಗಳ ಪ್ರವಾಸಗಳು ಆಯೋಗದ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಇರತಕ್ಕದ್ದು.

ಡಿ) ಅಧ್ಯಕ್ಷರು ಮತ್ತು ಸದಸ್ಯರು ಆಗತ್ಯವಿದ್ದರೆ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ರಾಜ್ಯ ಮತ್ತು ದೇಶದ ಹೊರಗೆ ಪ್ರವಾಸಗಳನ್ನು ಕೈಗೊಳ್ಳಬಹುದು.

ಇ) ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಅಧಿಕೃತ ಪ್ರವಾಸಗಳು ತಿಂಗಳಿಗೆ ಹತ್ತು ದಿನಗಳಿಗೆ ಸೀಮಿತವಾಗಿರತಕ್ಕದ್ದು.

**4. ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳ ಸಂದರ್ಭದಲ್ಲಿ ಏರ್ಪಾಟು :-**

ಅಧ್ಯಕ್ಷರ ಸ್ಥಾನವು ಖಾಲಿ ಉಂಟಾದರೆ ಅಥವಾ ಯಾವುದೇ ಕಾರಣಕ್ಕೆ ಅಧ್ಯಕ್ಷರು ಗೈರುಹಾಜರಾದರೆ ಅಥವಾ ತನ್ನ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ, ಅಂಥ ಕರ್ತವ್ಯಗಳನ್ನು ಸದಸ್ಯನು ಹೊಸ ಅಧ್ಯಕ್ಷರು ತನ್ನ ಸ್ಥಾನದ ಅಧಿಕಾರವನ್ನು ಸ್ವೀಕರಿಸುವ ತನಕ ಅಥವಾ ಸಂದರ್ಭಾನುಸಾರ ಅಧ್ಯಕ್ಷರು ತನ್ನ ಅಧಿಕಾರ ಸ್ವೀಕರಿಸುವವರೆಗೂ ಸರ್ಕಾರವು ನಿರ್ದೇಶಿಸಬಹುದಾದಂತೆ ನಿರ್ವಹಿಸತಕ್ಕದ್ದು.

**5. ಜವಾಬ್ದಾರಿಗಳ ವಿಭಜನೆ ಮತ್ತು ಕೆಲಸಗಳ ಹಂಚಿಕೆ :-**

1) ಅಧ್ಯಕ್ಷರು ಆಯೋಗದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಇಂತಹ ವಿಷಯಗಳಲ್ಲಿ ನಿರ್ದಿಷ್ಟ ಉಪಬಂಧವನ್ನು ಈ ನಿಯಮಗಳಲ್ಲಿ ರಚಿಸಿದ ಹೊರತು ಆಯೋಗದಲ್ಲಿ ಉದ್ಭವಿಸುವ ಎಲ್ಲ ವಿವಾದಗಳು ಮತ್ತು ವಿಷಯಗಳ ಮೇಲೆ ನಿರ್ಣಯ ಕೈಗೊಳ್ಳುವ ಅಧಿಕಾರಗಳ ಉತ್ತರದಾಯತ್ವವನ್ನು ಹೊಂದಿರತಕ್ಕದ್ದು.

2) ಅಧ್ಯಕ್ಷರು, ಆಯೋಗದ ಸದಸ್ಯರುಗಳಿಗೆ ವಿಷಯಗಳು/ಪ್ರದೇಶಗಳು ಮತ್ತು ಜವಾಬ್ದಾರಿಗಳನ್ನು ಹಂಚತಕ್ಕದ್ದು. ವಿಷಯಗಳು/ಪ್ರದೇಶಗಳು ಮತ್ತು ಜವಾಬ್ದಾರಿಗಳನ್ನು ಹಂಚಿಕೆ ಮಾಡುವ ಆದೇಶವನ್ನು ಸಂಬಂಧಪಟ್ಟವರಿಗೆಲ್ಲಾ ಆಯೋಗದ ಸದಸ್ಯ ಕಾರ್ಯದರ್ಶಿ ಅಥವಾ ಅಧಿಕೃತ ಅಧಿಕಾರಿಯ ಮೂಲಕ ತಿಳಿಸತಕ್ಕದ್ದು.

3) ಅಧ್ಯಕ್ಷರು, ಸದಸ್ಯರ ರಜೆಯನ್ನು ಮಂಜೂರು ಮಾಡಲು ಮತ್ತು ಪ್ರವಾಸಗಳಿಗೆ ಅನುಮೋದನೆ ನೀಡಲು ಅಧಿಕಾರ ಹೊಂದಿರತಕ್ಕದ್ದು.

4) ಅಧ್ಯಕ್ಷರು, ಆಯೋಗದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

5) ಸದಸ್ಯರುಗಳಿಗೆ ಹಂಚಿಕೆಯಾದ ವಿಷಯಗಳಿಗೆ ಸಂಬಂಧಿಸಿದಂತೆ ಆಯೋಗದ ಎಲ್ಲ ಪ್ರಮುಖ ತೀರ್ಮಾನಗಳನ್ನು ಅಧ್ಯಕ್ಷರ ಅನುಮೋದನೆಯೊಂದಿಗೆ ತೆಗೆದುಕೊಳ್ಳತಕ್ಕದ್ದು.

6) ಅಧ್ಯಕ್ಷರು, ತಾನು ಪ್ರಮುಖವೆಂದು ಪರಿಗಣಿಸುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಕೇಳಬಹುದು ಮತ್ತು ಈ ಬಗ್ಗೆ ಆಯೋಗದ ಸಭೆಗಳಲ್ಲಿ ಮಂಡಿಸಿ ತೀರ್ಮಾನವನ್ನು ಕೈಗೊಳ್ಳಬಹುದು.

7) ಆಯೋಗದ ಸದಸ್ಯರು ಆಯೋಗದ ಸಾಮೂಹಿಕ ಜವಾಬ್ದಾರಿಗಳನ್ನು ಹೊಂದಿರತಕ್ಕದ್ದು ಮತ್ತು ಆಯೋಗದ ಸಭೆಗಳಲ್ಲಿ ಭಾಗವಹಿಸುವ ಮತ್ತು ಹಾಜರಾಗುವ ಮೂಲಕ ಮತ್ತು ಅವರಿಗೆ ಹಂಚಿಕೆಯಾದ ವಿಷಯಗಳು/ಪ್ರದೇಶಗಳನ್ನು ಪರಿಶೀಲಿಸುವ ಮೂಲಕ ಕಾರ್ಯ ನಿರ್ವಹಿಸತಕ್ಕದ್ದು. ಸದಸ್ಯನು ಪ್ರಮುಖ ಕ್ರಮಗಳು ಮತ್ತು ತೀರ್ಮಾನವನ್ನು ಯಾವ ವಿಷಯದ ಬಗೆಗೆ ಪರಿಷ್ಕರಣೆ ಮಾಡಬೇಕಾಗಿದೆಯೋ ಅದನ್ನು ಆಯೋಗದ ಸಭೆಯಲ್ಲಿ ಮಂಡಿಸಬಹುದು.

8) ಯಾರೇ ಸದಸ್ಯ, ಆಯೋಗದ ಸಭೆಗಳಲ್ಲಿ ಯಾವುದೇ ವಿಷಯಗಳನ್ನು ಸೇರಿಸಲು ಸಲಹೆ ನೀಡಬಹುದು ಮತ್ತು ಅದು ಆಯೋಗದ ತೀರ್ಮಾನಗಳಿಗಾಗಿ ಸಹ ಸೇರಿಸತಕ್ಕದ್ದು.

9) ಪ್ರತಿಯೊಬ್ಬ ಸದಸ್ಯನು ತಮಗೆ ಹಂಚಿಕೆಯಾಗಬಹುದಾದ ವಿಷಯ ಮತ್ತು / ಅಥವಾ ಪ್ರದೇಶಗಳ ಪೂರ್ಣ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

10) ಒಬ್ಬರು ಅಥವಾ ಹೆಚ್ಚಿನ ಸದಸ್ಯರು, ಈ ನಿಯಮಗಳಲ್ಲಿ ನಿರ್ದಿಷ್ಟ ಪಡಿಸಿದ ಪ್ರಕ್ರಿಯೆಗಳಿಗನುಸಾರ ಆಯೋಗದಿಂದ ತನಿಖೆ ಅಥವಾ ವಿಚಾರಣೆ ಮೇರೆಗೆ ಯಾವುದೇ ವಿಷಯ / ವಿವಾದ / ಪ್ರಕರಣದ ಬಗ್ಗೆ ಸಾಕ್ಷ್ಯ ಅಥವಾ ಮಾಹಿತಿ ಸಂಗ್ರಹಿಸಲು ಅಥವಾ ಪ್ರಕರಣಗಳ ವಿಚಾರಣೆಗೆ ಆಯೋಗದ ಸಭೆಗಳನ್ನು ನಡೆಸಬಹುದು.

11) ಸದಸ್ಯರುಗಳು ಪ್ರವಾಸಗಳು ಮತ್ತು ಪ್ರಯಾಣಗಳು ಒಳಗೊಂಡಂತೆ ಎಲ್ಲ ವಿಷಯಗಳಲ್ಲಿ ಆಯೋಗದ ಸಿಬ್ಬಂದಿಯಿಂದ ನೆರವು ಹೊಂದತಕ್ಕದ್ದು.

## ಅಧ್ಯಾಯ-III

### 6. ಆಯೋಗದ ಸಿಬ್ಬಂದಿ

(1) ಆಯೋಗದಲ್ಲಿನ ಹುದ್ದೆಗಳನ್ನು ಯಾವುದೇ ರಾಜ್ಯ ಸಿವಿಲ್ ಸೇವೆಗಳು/ ವಿಶ್ವವಿದ್ಯಾನಿಲಯಗಳು/ಸ್ಥಳೀಯ ಪ್ರಾಧಿಕಾರಗಳು/ಸಾರ್ವಜನಿಕ ವಲಯ/ ಉದ್ಯಮಗಳು/ ಶಾಸನಬದ್ಧ ಮಂಡಳಿಗಳು/ನಿಗಮಗಳ ತತ್ಸಮಾನ ವೇತನಶ್ರೇಣಿಗಳು ಮತ್ತು ದರ್ಜೆಯನ್ನು ಹೊಂದಿರುವ ಅಧಿಕಾರಿಗಳು/ನೌಕರರನ್ನು ಪ್ರತಿನಿಯೋಜನೆ ಮೂಲಕ ಅಥವಾ ಮೇಲಿನ ಯಾವುದೇ ಸೇವೆಗಳಿಂದ ನಿವೃತ್ತಿ ಹೊಂದಿದ ಅಥವಾ ವಯೋನಿವೃತ್ತಿ ಹೊಂದಿದ ವ್ಯಕ್ತಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.

(2) ಪ್ರತಿನಿಯೋಜನೆಯ ಮೇಲಿನ ನೇಮಕಗಳು ಕರ್ನಾಟಕ ಸಿವಿಲ್ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಉಪಬಂಧಗಳು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರದ ಯಾವುದೇ ಇತರ ಆದೇಶಗಳಿಗನುಸಾರವಾಗಿ ಇರತಕ್ಕದ್ದು.

(3) ಸದಸ್ಯ ಕಾರ್ಯದರ್ಶಿಯು ಆಯೋಗದ ಆಡಳಿತ ವಿಭಾಗದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಆಯೋಗದ ಸಿಬ್ಬಂದಿಯ ನೆರವಿನೊಂದಿಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಆಯೋಗಕ್ಕೆ ನೆರವು ನೀಡತಕ್ಕದ್ದು.

(4) ಎಲ್ಲ ಪ್ರಮುಖ ಆಡಳಿತಾತ್ಮಕ ವಿಷಯಗಳನ್ನು ಸದಸ್ಯ ಕಾರ್ಯದರ್ಶಿಯ ಮುಂದೆ ಇಡತಕ್ಕದ್ದು. ಇವರು ಅಂಥ ವಿಷಯಗಳ ಮೇಲೆ ಸಾಮಾನ್ಯ ಅಥವಾ ವಿಶೇಷ ಆದೇಶಗಳನ್ನು ಹೊರಡಿಸಬಹುದು.

(5) ಸದಸ್ಯ ಕಾರ್ಯದರ್ಶಿಯು ಆಯೋಗದ ಸಭೆಗಳಿಗಾಗಿ ಸೂಚಿ ಪಟ್ಟಿಯನ್ನು ತಯಾರಿಸಬೇಕು ಮತ್ತು ನಡಾವಳಿಯನ್ನು ತಿಳಿಸುವ ಜವಾಬ್ದಾರನಾಗಿರತಕ್ಕದ್ದು.

(6) ಸದಸ್ಯ ಕಾರ್ಯದರ್ಶಿಯವರ ವರದಿಗಳನ್ನು ಅಂತಿಮಗೊಳಿಸಲು ಆಯೋಗಕ್ಕೆ ನೆರವು ನೀಡತಕ್ಕದ್ದು.

(7) ಸದಸ್ಯ ಕಾರ್ಯದರ್ಶಿಯು ತನ್ನ ವಿವೇಚನೆಯ ಅನುಸಾರ, ಆಯೋಗದ ಅಧೀನ ಸಿಬ್ಬಂದಿಗೆ ತನ್ನ ಯಾವುದೇ ಪ್ರಕಾರ್ಯಗಳ ಅಥವಾ ಅಧಿಕಾರವನ್ನು ಪ್ರತ್ಯಾಯೋಜಿಸಬಹುದು.

## ಅಧ್ಯಾಯ-IV

**7. ಆಯೋಗದ ಸಭೆಗಳು :-**

(1) ಆಯೋಗವು, ಬೆಂಗಳೂರಿನಲ್ಲಿ ಅಥವಾ ಅವಶ್ಯವೆನಿಸಿದಾಗ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ರಾಜ್ಯದ ಆಯ್ದ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು. ಪರಂತು, ಆಯೋಗವು ಒಂದು ತಿಂಗಳಲ್ಲಿ ಕನಿಷ್ಠ ಒಂದು ಬಾರಿ ಯಾದರೂ ಸಭೆ ಸೇರತಕ್ಕದ್ದು.

(2) ಆಯೋಗವು, ತಾನು ಸೂಕ್ತ ಎಂದು ಭಾವಿಸಿದಂತೆ ತನ್ನ ಕಾರ್ಯವಿಧಾನಗಳನ್ನು ವಿನಿಮಯಗೊಳಿಸಲು ಅಧಿಕಾರ ಹೊಂದಿರತಕ್ಕದ್ದು.

(3) ಆಯೋಗದ ಎಲ್ಲ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ ಕಾರ್ಯದರ್ಶಿ ಅಥವಾ ಸದಸ್ಯ ಕಾರ್ಯದರ್ಶಿಯು ಈ ಸಂಬಂಧಯುಕ್ತವಾಗಿ ಅಧಿಕೃತಗೊಳಿಸಿದ ಆಯೋಗದ ಯಾರೇ ಇತರ ಅಧಿಕಾರಿಯ ಮೂಲಕ ಅಧಿಪ್ರಮಾಣಗೊಳಿಸತಕ್ಕದ್ದು.

(4) ಅಧ್ಯಕ್ಷರು, ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಸಭೆ ನಡೆಸಲು ಉದ್ದೇಶಿಸಿರುವಾಗ ಕನಿಷ್ಠ ಮೂರು ಕೆಲಸದ ದಿನಗಳ ನೋಟೀಸನ್ನು ನೀಡತಕ್ಕದ್ದು ಮತ್ತು ಆಯೋಗದ ಸಭೆಗಳು ಬೆಂಗಳೂರಿನ ಹೊರ ಸ್ಥಳಗಳಲ್ಲಿ ನಡೆದರೆ ಕನಿಷ್ಠ ಏಳು ದಿನಗಳ ಮುಂಚಿತವಾಗಿ ನೋಟೀಸನ್ನು ಸದಸ್ಯರಿಗೆ ನೀಡತಕ್ಕದ್ದು. ತುರ್ತು ಸಭೆಗಳು ನಡೆಯುವ ಸಂದರ್ಭದಲ್ಲಿ, ಆಯೋಗವು ತುರ್ತಾಗಿ ಪರಿಗಣಿಸುವ ಪ್ರಮುಖ ವಿಷಯಗಳನ್ನು ವಿಲೆ ಮಾಡಲು ಅಧ್ಯಕ್ಷರು

ಸ್ವತಃ ಅಥವಾ ಸದಸ್ಯರ ಅಥವಾ ಸದಸ್ಯ ಕಾರ್ಯದರ್ಶಿಯವರ ಕೋರಿಕೆಯ ಮೇರೆಗೆ ಆಯೋಗವು ತುರ್ತು ಪರಿಗಣನೆಯ ಅಗತ್ಯ ಪ್ರಮುಖ ವಿಷಯಗಳ ವಿಲೆಗಾಗಿ ಸಹ ಸಭೆ ಕರೆಯತಕ್ಕದ್ದು.

(೫) ಆಯೋಗದ ಸಭೆಯ ಕೋರಂ ಅಧ್ಯಕ್ಷರು ಸೇರಿದಂತೆ ೨ ಆಗಿರತಕ್ಕದ್ದು, ಪರಂತು ಹಾಗೆ ಗೊತ್ತುಪಡಿಸಿದ ಕೋರಂ ಆಯೋಗದಲ್ಲಿ ಖಾಲಿ ಸ್ಥಾನಗಳಿದ್ದಾಗ ಆಯೋಗದಲ್ಲಿರುವ ಅಂಥ ಖಾಲಿ ಸ್ಥಾನಗಳ ಸಂಖ್ಯೆಯಷ್ಟು ಕಡಿಮೆಗೊಳಿಸತಕ್ಕದ್ದು.

(೬) ಆಯೋಗದ ಪ್ರತಿಯೊಂದು ತೀರ್ಮಾನವು ಹಾಜರಿರುವ ಸದಸ್ಯರ ಬಹುಮತ ಮತ್ತು ಮತದಾನದ ಮೂಲಕ ತೀರ್ಮಾನಿಸತಕ್ಕದ್ದು.

ಪರಂತು, ಮತಗಳು ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷರು ನಿರ್ಣಾಯಕ ಮತವನ್ನು ಚಲಾಯಿಸಬಹುದು.

(೭) ಆಯೋಗವು ವಿರುದ್ಧವಾದ ತೀರ್ಮಾನಗಳ ಸಂಬಂಧ, ಆಯೋಗದ ಸಭೆಯ ನಡಾವಳಿಯನ್ನು ಸದಸ್ಯ ಕಾರ್ಯದರ್ಶಿಯು ದಾಖಲೆ ಮಾಡತಕ್ಕದ್ದು ಮತ್ತು ಅವನು ಸದರಿ ನಡಾವಳಿಗಳ ಪ್ರತಿಗಳನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಸಭೆಯು ಮುಕ್ತಾಯವಾದ ಸಾಧ್ಯವಾದಷ್ಟು ಬೇಗನೆ ಅಧ್ಯಕ್ಷರು ಮತ್ತು ಸದಸ್ಯರಿಗೆ ತಿಳಿಸತಕ್ಕದ್ದು. ಅವನು, ಮುಂದಿನ ಸಭೆಯಲ್ಲಿ ಅಧ್ಯಕ್ಷರ ಸಹಿಗಾಗಿ ನಡಾವಳಿಗಳನ್ನು ಹಾಜರುಪಡಿಸತಕ್ಕದ್ದು, ಅಧ್ಯಕ್ಷರು ಸಹಿಮಾಡಿದ ನಂತರ, ಸಭೆಯ ನಡೆವಳಿಕೆಗಳು ಊರ್ಜಿತವಾಗತಕ್ಕದ್ದು.

(೮) ಸಭೆಯ ನಡಾವಳಿಗಳನ್ನು ದಾಖಲಿಸಲು ಅದರ ಸರಿತನದ ಬಗ್ಗೆ ಯಾವುದೇ ಆಕ್ಷೇಪಣೆ ಇದ್ದರೆ ಆಯೋಗದ ಮುಂದೆ ಸಭೆಯಲ್ಲಿ ಚರ್ಚೆಗಾಗಿ ಕೈಗೊಳ್ಳಬಹುದು ಮತ್ತು ಆಯೋಗವು ತೀರ್ಮಾನಿಸತಕ್ಕದ್ದು.

(೯) ಸದಸ್ಯ ಕಾರ್ಯದರ್ಶಿಯು ವ್ಯವಹಾರಗಳ ದಾಖಲೆಯನ್ನು ಇಟ್ಟುಕೊಳ್ಳತಕ್ಕದ್ದು ಮತ್ತು ಸದಸ್ಯರುಗಳು ಮತ್ತು ಅಧ್ಯಕ್ಷರಿಗೆ ಅವುಗಳ ಪ್ರಮಾಣೀಕರಿಸಿದ ಜೆರಾಕ್ಸ್ ಪ್ರತಿಯನ್ನು ಒದಗಿಸತಕ್ಕದ್ದು. ಅಧ್ಯಕ್ಷರು ತಮ್ಮ ವಿವೇಚನಾನುಸಾರ ಆಯೋಗದ ಸಭೆಯ ಪೂರ್ಣ ವ್ಯವಹರಣೆಗಳನ್ನು ಲಿಖಿತದಲ್ಲಿ ಅಧಿಕೃತಗೊಳಿಸಿದ ಹೊರತು ಸಂಬಂಧಪಟ್ಟ ಎಲ್ಲರು ನಡಾವಳಿಗಳನ್ನು ರಹಸ್ಯವಾಗಿ ಇಟ್ಟಿರತಕ್ಕದ್ದು.

೮. **ಆಯೋಗವು ತನ್ನ ಸಭೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳಬೇಕಾಗಿರುವ ವಿಷಯಗಳು** :- ಈ ಮುಂದಿನ ವಿಷಯಗಳನ್ನು ಆಯೋಗದ ಸಭೆಯಲ್ಲಿ;

i. ಅಧಿನಿಯಮಕ್ಕೆ ಅಥವಾ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ಈ ನಿಯಮಗಳಿಗೆ ಯಾವುದೇ ತಿದ್ದುಪಡಿ;

ii. ಆಯೋಗವು ನೇರವಾಗಿ ತನಿಖೆ ಮಾಡಬೇಕಾದ ಅಥವಾ ವಿಚಾರಣೆ ಮಾಡಬೇಕಾದ ವಿಷಯಗಳು;

iii. ಈ ನಿಯಮಗಳಲ್ಲಿ ಉಪಬಂಧಿಸಿದಂತೆ ಆಯೋಗವು ಪರಿಗಣಿಸಲು ಅಗತ್ಯಪಡಿಸಿದಂತೆ ಎಲ್ಲ ವರದಿಗಳು;

iv. ಅಧ್ಯಕ್ಷರ ಅನುಮತಿಯೊಂದಿಗೆ, ಸದಸ್ಯನು ಸಭೆ ಮುಂದೆ ಮಂಡಿಸಲು ಇಚ್ಛಿಸಿದಂತೆ ಯಾವುದೇ ವಿಷಯಗಳು;

v. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಕ್ಷೇಮಾಭಿವೃದ್ಧಿ ಮತ್ತು ಪ್ರಗತಿಗಾಗಿ ಸುರಕ್ಷಾ ಕ್ರಮಗಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ವಿಷಯಗಳು;

vi. ಅಧ್ಯಕ್ಷರು, ಆಯೋಗದ ಸಭೆಯಲ್ಲಿ ಮಂಡಿಸಬೇಕೆಂದು ನಿರ್ದೇಶಿಸಬಹುದಾದಂಥ ಯಾವುದೇ ವಿಷಯ ಪರಿಗಣನೆ ಮತ್ತು ತೀರ್ಮಾನಕ್ಕೆ ಮಂಡಿಸತಕ್ಕದ್ದು.

೯. **ಸಭೆಯ ಕಾರ್ಯಸೂಚಿ** :- ಕಾರ್ಯಸೂಚಿಯನ್ನು ಸಾಮಾನ್ಯವಾಗಿ ಸಭೆಯ ಮೊದಲು ಕನಿಷ್ಠ ೩ ದಿನಗಳ ಮುಂಚಿತವಾಗಿ ಎಲ್ಲ ಸದಸ್ಯರಿಗೆ ರವಾನಿಸತಕ್ಕದ್ದು. ಪರಂತು, ತುರ್ತು ಸಭೆಗೆ ಕಾಲಮಿತಿಯು ಅನ್ವಯವಾಗುವುದಿಲ್ಲ. ಸಭೆಯ ನಡಾವಳಿಗಳನ್ನು ಸಾಧ್ಯವಾದಷ್ಟು ಬೇಗನೆ ಎಲ್ಲ ಸದಸ್ಯರಿಗೆ ರವಾನಿಸತಕ್ಕದ್ದು.

## ಅಧ್ಯಾಯ-V

10. **ಆಯೋಗದಿಂದ ತನಿಖೆ ಮತ್ತು ವಿಚಾರಣೆ** :-

(1) ಆಯೋಗವು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಸುರಕ್ಷತೆಗಳು, ರಕ್ಷಣೆ, ಕ್ಷೇಮಾಭಿವೃದ್ಧಿ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ತನಿಖೆ ಮಾಡಲು ಅಥವಾ ಆಯೋಗವು ನೇರವಾಗಿ ತನಿಖೆ ಅಥವಾ ವಿಚಾರಣೆ ನಡೆಸಲು ತೀರ್ಮಾನಿಸಿದೆಯೋ ಆ ನಿರ್ದಿಷ್ಟ ದೂರುಗಳ ವಿಚಾರಣೆಗಾಗಿ ಸಭೆಗಳನ್ನು ನಡೆಸಬಹುದು. ಅಂಥ ಉಪವೇಶನಗಳನ್ನು ಆಯೋಗದ ಕೇಂದ್ರ ಸ್ಥಳದಲ್ಲಾಗಲಿ ಅಥವಾ ರಾಜ್ಯದ ಯಾವುದೇ ಇತರ ಸ್ಥಳದಲ್ಲಾಗಲಿ ನಡೆಸಬಹುದು.

(2) ಆಯೋಗದ ಸಭೆಗಳನ್ನು ವಿಚಾರಣೆ ನಡೆಸಲು ಉದ್ದೇಶಿಸಿದ ಪಕ್ಷಕಾರರಿಗೆ ಯುಕ್ತ ನೋಟಿಸನ್ನು ನೀಡಿದ ನಂತರ ನಡೆಸತಕ್ಕದ್ದು ಮತ್ತು ಅಗತ್ಯವಿದ್ದರೆ ಸಾರ್ವಜನಿಕರಿಗೆ ಮುಂಚಿತವಾಗಿ ಪ್ರಚಾರದ ನೋಟೀಸನ್ನು ಸಹ ನೀಡತಕ್ಕದ್ದು. ಸಂದರ್ಭಾನುಸಾರ ನೋಟೀಸು ಅಥವಾ ಪ್ರಚಾರದ ಮೂಲಕ ವಿಚಾರಣೆ ನಡೆಯುತ್ತಿರುವ ವಿಷಯದಲ್ಲಿ ನೋಟೀಸು ಅಥವಾ ಮುಂಚಿತವಾಗಿ ಮಾಹಿತಿ ನೀಡಿ ತನಿಖೆ ಅಥವಾ ವಿಚಾರಣೆ ಮೇರೆಗಿನ ವಿಷಯಗಳಲ್ಲಿ

ಬಾಧಿತವಾಗಿರುವಂಥ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳ ಸದಸ್ಯರ ಬಗ್ಗೆ ಎಚ್ಚರಿಕೆ ವಹಿಸತಕ್ಕದ್ದು.

(3) ನೇರ ತನಿಖೆ ಅಥವಾ ವಿಚಾರಣೆಗಾಗಿ ತೀರ್ಮಾನ ಕೈಗೊಂಡಾಗ, ಅಗತ್ಯ ಸಿಬ್ಬಂದಿಯನ್ನು, ಅಂಥ ತನಿಖೆ ಅಥವಾ ವಿಚಾರಣೆಯನ್ನು ವಹಿಸಿಕೊಂಡಿರುವ ಸದಸ್ಯ(ರು)ಗೆ ನೀಡತಕ್ಕದ್ದು ಮತ್ತು ಅವರು ಅಂಥ ಸಭೆಗಳನ್ನು ವ್ಯವಸ್ಥೆಗೊಳಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(4) ತನಿಖೆ ಅಥವಾ ವಿಚಾರಣೆಯು ನಡೆಯುವ ಅವಧಿಯಲ್ಲಿ ಆಯೋಗವು, ಪ್ರಮಾಣವಚನ ಅಥವಾ ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯಬಹುದು. ಆಯೋಗವು ಅವಶ್ಯವೆಂದು ಪರಿಗಣಿಸಿದರೆ ತನಿಖೆ ಅಥವಾ ವಿಚಾರಣೆಯಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಅವಶ್ಯಕವೆಂದು ಪರಿಗಣಿಸುವಾಗ ಯಾರೇ ವ್ಯಕ್ತಿಯ ಖುದ್ದು ಹಾಜರಿಯನ್ನು ಅಗತ್ಯ ಪಡಿಸಬಹುದು ಮತ್ತು ಅವನಿಗೆ ಸಮನ್ಗಳನ್ನು ಜಾರಿಗೊಳಿಸಬಹುದು. ಸಮನ್ಗಳನ್ನು ಸ್ವೀಕರಿಸಿದ ದಿನಾಂಕದಿಂದ ಆಯೋಗದ ಮುಂದೆ ಹಾಜರಾಗಬೇಕೆಂದು ನಿರ್ದೇಶಿಸಿದ ವ್ಯಕ್ತಿಗೆ ಕನಿಷ್ಠ ಏಳು ದಿನಗಳ ನೋಟೀಸಿನ ಸಮನ್ಗಳನ್ನು ಒದಗಿಸತಕ್ಕದ್ದು.

(5) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ಸಂಬಂಧಿಸಿದ ಇತರ ವಿಷಯಗಳ ಸ್ವತ್ತು, ಸೇವೆ ಅಥವಾ ಉದ್ಯೋಗದ ಸಂಬಂಧ ತಕ್ಷಣ ಬೆದರಿಕೆ ಇರುವಾಗ ಮತ್ತು ಆಯೋಗವು ವಿವಾದಾಂಶವನ್ನು ಕೈಗೊಂಡಿದೆ ಎಂದು ಅವರಿಗೆ ತಿಳಿಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಟೆಲೆಕ್ಸ್ ಮತ್ತು ಫ್ಯಾಕ್ಸ್ ಅಥವಾ ಇ-ಮೇಲ್ ಮೂಲಕ ಸೂಚನೆ, ನೀಡಿ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದು. ಟೆಲಿಗ್ರಾಮ್ ಅಥವಾ ಫ್ಯಾಕ್ಸ್ ಅಥವಾ ಇ-ಮೇಲ್ ತುರ್ತು ಪ್ರತ್ಯುತ್ತರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ತರಿಸಿಕೊಳ್ಳತಕ್ಕದ್ದು. ಒಂದು ವಾರದೊಳಗೆ ಪತ್ರವನ್ನು ಸ್ವೀಕರಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಪ್ರಾಧಿಕಾರವು, ವಿಚಾರಣೆಗಾಗಿ ಶೀಘ್ರ ನೋಟೀಸಿನಲ್ಲಿ ಸಮನ್ ನೀಡತಕ್ಕದ್ದು.

(6) ಅಗತ್ಯಪಡಿಸಿದ ಸಭೆಗಳನ್ನು ನಡೆಸಿದ ನಂತರ, ತನಿಖೆಯನ್ನು ನಡೆಸಿದಂಥ ಸದಸ್ಯ(ರು) ವರದಿಯನ್ನು ಸಲ್ಲಿಸತಕ್ಕದ್ದು ಇದನ್ನು ಸದಸ್ಯಕಾರ್ಯದರ್ಶಿ ಅಥವಾ ವರದಿಯನ್ನು ಸ್ವೀಕರಿಸಲು ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ ಕಳುಹಿಸತಕ್ಕದ್ದು. ಇದನ್ನು ಪರಿಶೀಲಿಸಿದ ತರುವಾಯ ಅಧ್ಯಕ್ಷರ ಅನುಮೋದನೆಯೊಂದಿಗೆ ವರದಿಯ ಬಗ್ಗೆ ಕ್ರಮವನ್ನು ಆರಂಭಿಸಬಹುದು. ವಾಸ್ತವಿಕ ಸಾಕ್ಷ್ಯದ ನೋಟೀಸು, ವಿಚಾರಣಾ ನೋಟೀಸು ಮತ್ತು ಸಾರ್ವಜನಿಕ ನೋಟೀಸು ಕ್ರಮವಾಗಿ ನಮೂನೆ ಏ, ಏಏ ಮತ್ತು ಏಏಏ ರಲ್ಲಿ ಉಪಬಂಧಿಸಿದೆ.

11. **ಕೆಲವು ದಾಖಲೆಗಳನ್ನು ರಹಸ್ಯವಾಗಿಡುವುದು :-**

ಆಯೋಗವು ಸಭೆಗಳಲ್ಲಿ ಅಥವಾ ಅನ್ಯಥಾ ತೀರ್ಮಾನಗಳ ಮೂಲಕ ಯಾವುದೇ ವಿಷಯದ ಮೇಲೆ ಮಾಡಲಾದ ಯಾವುದೇ ವರದಿಯ ಒಳಾಂಶಗಳನ್ನು ರಹಸ್ಯವಾಗಿ ಇಟ್ಟುಕೊಳ್ಳಬೇಕು ಮತ್ತು ಅಂಥ ವರದಿಯ ಸಂಬಂಧ ಅಧಿಕೃತಗೊಳಿಸಲಾದ ವ್ಯಕ್ತಿಯ ಹೊರತಾಗಿ ಯಾರೇ ವ್ಯಕ್ತಿಗೆ ಬಹಿರಂಗ ಪಡಿಸಬಾರದೆಂದು ನಿರ್ದೇಶಿಸಬಹುದು.

12. **ಕಾನೂನು ಕ್ರಮಗಳು :-** ಆಯೋಗವು, ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವ ಅನುಸರಣೆಯಲ್ಲಿ ಜಾರಿಗೊಳಿಸಲು ಅಗತ್ಯಪಡಿಸಿದಂಥ ಎಲ್ಲಾ ಸಮನ್ಸ್‌ಗಳು ಹಾಗೂ ವಾರೆಂಟ್‌ಗಳು ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು ಹಾಗೂ ಆಯೋಗದ ಮೊಹರನ್ನು ಹೊಂದಿರತಕ್ಕದ್ದು. ಕಾನೂನು ಕ್ರಮಗಳ ಜಾರಿಗಾಗಿ ಅನ್ವಯವಾಗಬಹುದಾದ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ಆಯೋಗವು ಪಾಲಿಸತಕ್ಕದ್ದು.

13. **ಸಮನ್ಸ್‌ಗಳು ಹಾಗೂ ವಾರಂಟುಗಳ ನಮೂನೆ :-** ಸಮನ್ಸ್‌ಗಳು ಹಾಗೂ ವಾರಂಟುಗಳು ಕ್ರಮವಾಗಿ ನಮೂನೆ IV ಮತ್ತು V ರಲ್ಲಿ ಇರತಕ್ಕದ್ದು.

14. **ಪತ್ರಗಳು ಹಾಗೂ ನೋಟೀಸುಗಳ ಜಾರಿ :-** ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸದೆ ಜಾರಿಗೊಳಿಸಬೇಕಾದಂಥ ದಸ್ತಾವೇಜುಗಳು ಇತ್ಯಾದಿಗಳ ಸಲ್ಲಿಕೆಗೆ ಅಗತ್ಯವಿರುವ ಪತ್ರಗಳು ಹಾಗೂ ನೋಟೀಸುಗಳನ್ನು ಆಯೋಗವು ಒದಗಿಸಬಹುದು ಹಾಗೂ ಸದಸ್ಯ ಕಾರ್ಯದರ್ಶಿ ಅಥವಾ ಅಧಿಕೃತಗೊಳಿಸಲಾದ ಅಧಿಕಾರಿಯು ಸಹಿ ಮಾಡಿರಬೇಕು.

## ಅಧ್ಯಾಯ-VI

15. **ಆಯೋಗದ ಸಭೆಗಳು :-**

(1) ಒಂದು ವಿಷಯವನ್ನು ಆಯೋಗವು ನೇರವಾಗಿ ತನಿಖೆ ಅಥವಾ ವಿಚಾರಣೆ ಮಾಡಬೇಕಾದಾಗ ಆಯೋಗದ ಸಭೆಗಳನ್ನು ನಡೆಸುವ ಮೂಲಕ ಹಾಗೆ ಮಾಡಬಹುದು. ಅಂಥ ಸಭೆಯ ಸಂದರ್ಭದಲ್ಲಿ ಎಲ್ಲಾ ಸದಸ್ಯರ ಹಾಜರಾತಿಯು ಅಗತ್ಯವಾಗಿರುವುದಿಲ್ಲ.

(2) **ಹಾಜರಿರಬೇಕಾದ ಅಧಿಕಾರಿಗಳು :-** ಒಬ್ಬ ಸದಸ್ಯನು ಸಭೆಯನ್ನು ನಡೆಸುವಾಗ, ಆಯೋಗದ ಅಧಿಕೃತ ಅಧಿಕಾರಿ ಅಥವಾ ಸದಸ್ಯ ಕಾರ್ಯದರ್ಶಿಯು ಪ್ರಕಾರ್ಯಗಳನ್ನು ಯುಕ್ತವಾಗಿ ಹಾಗೂ ಪ್ರಾಮಾಣಿಕವಾಗಿ ನಿರ್ವಹಣಾ ಸಭೆಯನ್ನು ನಡೆಸುವ ಸದಸ್ಯ(ರು)ಗೆ ನೆರವಾಗಲು ಹಾಜರಿರತಕ್ಕದ್ದು, ಸದಸ್ಯ(ರು) ವರದಿಯನ್ನು ಸಿದ್ಧಪಡಿಸಲು ಕೋರಿದರೆ ಅದನ್ನು ಸಿದ್ಧಪಡಿಸಲು ಸದಸ್ಯರುಗಳಿಗೆ ನೆರವಾಗುವುದು. ಅಧಿಕೃತ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು. ಕಾರ್ಯವಿಧಾನಗಳನ್ನು ಅನುಸರಿಸಲು ಸದಸ್ಯ(ರು)ಗೆ ನೆರವಾಗುವುದಕ್ಕೆ ಸಹ ಅಧಿಕಾರಿಯು ಜವಾಬ್ದಾರನಾಗಿರತಕ್ಕದ್ದು.

(೩) **ಸಭೆಗಳ ಸಂಖ್ಯೆ** :- ಆಯೋಗದ ಸಭೆಗಳನ್ನು ಅಗತ್ಯವಿದ್ದಾಗಲೇ ನಡೆಸಬಹುದು. ಆಯೋಗವು ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ವಿವಿಧ ಸದಸ್ಯರುಗಳೊಂದಿಗೆ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚಿನ ಸಭೆಗಳನ್ನು ನಡೆಸಬಹುದು.

(4) **ಸಭೆಗಳ ಕಾರ್ಯಕ್ರಮ** :- ಸಭೆಗಳ ಕಾರ್ಯಕ್ರಮವನ್ನು ಕೇಂದ್ರ ಕಚೇರಿಗಳು ಹಾಗೂ ಇತರ ಸ್ಥಳಗಳೆರಡು ಕಡೆಗಳಲ್ಲಿ ಸಾಮಾನ್ಯವಾಗಿ ಮುಂಚಿತವಾಗಿ ಮತ್ತು ಯುಕ್ತವಾಗಿ ತಿಳಿಸಿ ಪ್ರತಿ ತಿಂಗಳು ನಡೆಸಬಹುದು.

(೫) **ಸಾಕ್ಷಿದಾರರಿಗೆ ವೆಚ್ಚಗಳನ್ನು ಭರಿಸುವುದು** :- (1) ಆಯೋಗವು, ಸಭೆಯಲ್ಲಿ ಆಯೋಗದ ಮುಂದೆ ಹಾಜರಾಗಲು ಸಮನ್ಗಳ ಮೂಲಕ ಕರೆಯಲಾದಂಥ ವ್ಯಕ್ತಿಗಳಿಗೆ ಪ್ರಯಾಣವೆಚ್ಚಗಳನ್ನು ಭರಿಸಬಹುದು. ಪರಂತು, ವ್ಯಕ್ತಿಯ ವಾಸಸ್ಥಳವು, ಆಯೋಗದ ಸಭೆಯ ಸ್ಥಳದಿಂದ ೮ ಕಿ.ಮೀ ಗಳಿಗಿಂತ ಹೆಚ್ಚಾಗಿರಬೇಕು. ಹಾಗೆ ಭರಿಸಲಾದ ಮೊತ್ತವು ವ್ಯಕ್ತಿಯು ಯಾವುದೇ ಇತರ ಮೂಲದಿಂದ ಪ್ರಯಾಣ ಮತ್ತು ದಿನಭತ್ಯಕ್ಕೆ ಹಕ್ಕುಳ್ಳವನಾಗಿಲ್ಲದಿದ್ದರೆ ವಾಸ್ತವಿಕ ಪ್ರಯಾಣ ವೆಚ್ಚಗಳು ಹಾಗೂ ವ್ಯಕ್ತಿಯು ಆಯೋಗದ ಸಭೆಯಲ್ಲಿ ಹಾಜರಾಗಿದ್ದ ದಿನಗಳ ಸಂಖ್ಯೆಗಳಿಗಾಗಿ ದಿನಭತ್ಯಕ್ಕೆ ಒಳಪಟ್ಟಿರತಕ್ಕದ್ದು ಮುಂದೆ ಪ್ರಯಾಣವೆಚ್ಚಗಳ ಮಿತಿಯು ಆಯೋಗವು ನಿರ್ದಿಷ್ಟಪಡಿಸಬಹುದಾದ ದರಗಳ ಆಧಾರದ ಮೇಲೆ ಲೆಕ್ಕ ಹಾಕಲಾದ ರೈಲುದರ ಹಾಗೂ ರಸ್ತೆಯ ದೂರದ ಆಧಾರ ಮೇಲೆ ನಿರ್ಧರಿಸತಕ್ಕದ್ದು. ವ್ಯಕ್ತಿಗಳ ಅರ್ಹತೆಯ ಬಗ್ಗೆ ಯಾವುದೇ ಸಂದೇಹಗಳು ಇದ್ದ ಸಂದರ್ಭದಲ್ಲಿ, ಆಯೋಗದ ಸದಸ್ಯ ಕಾರ್ಯದರ್ಶಿಯ ನಿರ್ಣಯವು ಅಂತಿಮವಾಗಿರತಕ್ಕದ್ದು.

(2) ಸರ್ಕಾರಿ/ಸಾರ್ವಜನಿಕ ವಲಯ ಉದ್ದಿಮೆ ನೌಕರರಾಗಿರುವ ವ್ಯಕ್ತಿಗಳನ್ನು ಆಯೋಗದ ಮುಂದೆ ಹೇಳಿಕೆ ನೀಡಲು ಅಥವಾ ದಾಖಲೆಗಳನ್ನು ಹಾಜರುಪಡಿಸಲು ಸಮನ್ ಮಾಡಿದ್ದರೆ, ಅದನ್ನು ಕರ್ತವ್ಯದ ಮೇಲೆ ಎಂಬುದಾಗಿ ಭಾವಿಸತಕ್ಕದ್ದು.

(3) ಆಯೋಗದ ಸದಸ್ಯ ಕಾರ್ಯದರ್ಶಿಯು ಹಾಗೆ ಹಾಜರಾಗುವ ಸಂಬಂಧಪಟ್ಟ ವ್ಯಕ್ತಿಗಳಿಗೆ ಮೇಲಿನಂತೆ ಪಾವತಿ ಮಾಡುವ ಅಂಥ ಕ್ಲೇಮುಗಳನ್ನು ಪಾಲಿಸಲು ಸೂಕ್ತ ವಿಧಾನವನ್ನು ರೂಪಿಸಬಹುದು.

(4) ಮೇಲಿನಂತೆ ಪ್ರಯಾಣ ವೆಚ್ಚಗಳಿಗಾಗಿ ಕ್ಲೇಮು, ವ್ಯಕ್ತಿಯು ಸ್ವಂತ ಒಪ್ಪಿಗೆಯ ಮೇಲೆ ಮಾಡುವ ಯಾವುದೇ ತನಿಖೆ ಅಥವಾ ವಿಚಾರಣೆಯಲ್ಲಿ ಅಥವಾ ಆಯೋಗವು ಸಮನ್ ಜಾರಿಗೊಳಿಸಿದ ಸೂಚನೆ ಅಥವಾ ನೋಟೀಸಿಗಾಗಿ ಆಯೋಗದ ಮುಂದೆ ಹಾಜರಾಗುವಂಥ ವ್ಯಕ್ತಿಯ ಸಂಬಂಧದಲ್ಲಿ ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ-VII

೧೫. **ಆಯೋಗದ ಸಲಹಾ ಕಾರ್ಯ** :- ಆಯೋಗವು ತನ್ನ ಸದಸ್ಯ ಕಾರ್ಯದರ್ಶಿಯವರ ಮೂಲಕ ಸಭೆಗಳು, ವೈಯಕ್ತಿಕ ಸಂಪರ್ಕಗಳು, ಭೇಟಿಗಳು ಹಾಗೂ ಪತ್ರವ್ಯವಹಾರಗಳ ಮುಖಾಂತರ ರಾಜ್ಯ

ಸರ್ಕಾರಿ ಇಲಾಖೆಗಳು / ಇತರ ಸಂಸ್ಥೆಗಳೊಂದಿಗೆ ಪರಸ್ಪರ ಕಾರ್ಯನಿರ್ವಹಿಸತಕ್ಕದ್ದು. ಈ ಸಂಬಂಧದಲ್ಲಿ ಮಾಹಿತಿಯನ್ನು, ಸಾಕಷ್ಟು ಮುಂಚಿತವಾಗಿ ಸಂಬಂಧಪಟ್ಟ ಇಲಾಖೆ / ಸಂಸ್ಥೆಗಳಿಗೆ ಕಳುಹಿಸಬಹುದು.

16. **ರಾಜ್ಯ ಯೋಜನಾ ಮಂಡಳಿಯೊಂದಿಗೆ ಪರಸ್ಪರ ಕಾರ್ಯನಿರ್ವಹಣೆ :-** ಆಯೋಗವು, ಸಮಿತಿಗಳು, ಕಾರ್ಯನಿರ್ವಾಹಕ ಸಮೂಹಗಳು ಅಥವಾ ಯೋಜನಾ ಮಂಡಳಿಯು ಸ್ಥಾಪಿಸಿದಂಥ ಇತರ ಸಂಸ್ಥೆಗಳ ಮನವಿಗಳ ಮೂಲಕ ಸೂಕ್ತ ಹಂತಗಳಲ್ಲಿ ರಾಜ್ಯ ಯೋಜನಾ ಮಂಡಳಿಯೊಂದಿಗೆ ಪರಸ್ಪರ ವ್ಯವಹರಿಸತಕ್ಕದ್ದು. ಆಯೋಗವು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಕ್ರಮಗಳು ಹಾಗೂ ಯೋಜನೆ ಹಾಗೂ ಅಭಿವೃದ್ಧಿ ಮತ್ತು ಮೌಲ್ಯಮಾಪನದ ವಿಧಾನಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಪ್ರತಿಗಳನ್ನು ಕಳುಹಿಸಲು ಯೋಜನಾ ಮಂಡಳಿಯನ್ನು ಕೋರಬಹುದು.

## ಅಧ್ಯಾಯ- VIII

17. **ಆಯೋಗದ ಕಾರ್ಯಗಳ ಮೇಲ್ವಿಚಾರಣೆ:-** (1) ಆಯೋಗವು, ಕಾಲಕಾಲಕ್ಕೆ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಉಪಬಂಧಿಸಲಾದ ಸುರಕ್ಷತೆಗಳು ಹಾಗೂ ಇತರ ಸಾಮಾಜಿಕ ಆರ್ಥಿಕ ಅಭಿವೃದ್ಧಿಪರ ಕ್ರಮಗಳಿಗೆ ಸಂಬಂಧಪಟ್ಟಂತೆ ತಾನು ಮೇಲ್ವಿಚಾರಣೆ ಮಾಡುವ ವಿಷಯಗಳು ಅಥವಾ ಸಂಗತಿಗಳು ಮತ್ತು ಪ್ರದೇಶಗಳನ್ನು ನಿರ್ವಹಣೆ ಮಾಡಬಹುದು.

18. **ವಿವರಪಟ್ಟಿಗಳು ಹಾಗೂ ವರದಿಗಳು :-**

(1) ಆಯೋಗವು ಮೇಲ್ವಿಚಾರಣೆ ಮಾಡಬೇಕಾದಂಥ ವಿಷಯದ ನಿಯಂತ್ರಣದ ಜವಾಬ್ದಾರಿ ಹೊಂದಿರುವ ಯಾವುದೇ ಪ್ರಾಧಿಕಾರವು, ಆಯೋಗವು ಅಗತ್ಯಪಡಿಸಿದಂತೆ ವರದಿಗಳನ್ನು ಒದಗಿಸತಕ್ಕದ್ದು.

(2) ಆಯೋಗವು ಕಾಲಕಾಲಕ್ಕೆ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳಿಗಾಗಿ ಇರುವ ಸುರಕ್ಷತಾ ಕಾರ್ಯಗಳ ಅನುಷ್ಠಾನ ಪ್ರಭಾರಹೊಂದಿರುವಂಥ ರಾಜ್ಯ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ನಿಗಮಿತ ನಿಕಾಯಗಳು ಅಥವಾ ಯಾವುದೇ ಇತರ ಪ್ರಾಧಿಕಾರಗಳಿಂದ ಯಾವುದೇ ನಿರ್ದಿಷ್ಟ ವಿಷಯ ಅಥವಾ ಸಂಗತಿಯ ಬಗ್ಗೆ ಮಾಹಿತಿ ಹಾಗೂ ವಿವರವನ್ನು ಒದಗಿಸಲು ಸೂಚನೆಗಳನ್ನು ಹೊರಡಿಸಬಹುದು.

19. **ಅನುಸರಣ ಕ್ರಮ:-**

(1) ಮೇಲ್ವಿಚಾರಣೆ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡುವ ಕ್ರಮವಾಗಿ ಆಯೋಗವು ಮಾಹಿತಿಯನ್ನು ಪಡೆದುಕೊಂಡ ತರುವಾಯ ಹಾಗೂ ಸಾಧ್ಯವಾದಷ್ಟು ಬೇಗನೆ ನಿರ್ಣಯವನ್ನು ತೆಗೆದುಕೊಂಡ ಮೇಲೆ ರಕ್ಷಣಾ ಕಾರ್ಯಗಳ ಅನುಷ್ಠಾನದಲ್ಲಿ ಗಮನಿಸಿದಂಥ ನ್ಯೂನತೆಗಳನ್ನು

ವಿವರಿಸಿ, ಸಂಬಂಧಪಟ್ಟ ಪ್ರಾಧಿಕಾರಕ್ಕೆ ವಿಷಯಗಳನ್ನು ತಿಳಿಸಬೇಕು ಹಾಗೂ ಅಗತ್ಯ ಸೂಕ್ತ ಕ್ರಮಗಳನ್ನು ಸಲಹೆ ಮಾಡಬೇಕು.

(2) ಆಯೋಗವು (1)ನೇ ಉಪ-ನಿಯಮದ ಮೇರೆಗೆ ಕಳುಹಿಸಿದ ವಿಷಯಾನುಸಾರ ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಅಭಿಪ್ರಾಯಗಳನ್ನು ಕೋರಬಹುದು.

(3) ಆಯೋಗವು ಸಂವಿಧಾನದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ರಾಜ್ಯ ಸರ್ಕಾರದ ಯಾವುದೇ ಆದೇಶದ ಮೇರೆಗೆ ಅನುಸೂಚಿತ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಇರುವ ರಕ್ಷಣಾ ಕ್ರಮಗಳು ಹಾಗೂ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಕ್ರಮಗಳಿಗೆ ಸಂಬಂಧಪಟ್ಟ ವಿಷಯಗಳ ಮೇಲ್ವಿಚಾರಣಾ ಕಾರ್ಯವಿಧಾನದ ಮೂಲಕ ಅಭಿಪ್ರಾಯ ಪಟ್ಟ ತನ್ನ ತೀರ್ಮಾನಗಳು ಮತ್ತು ಗೊತ್ತುವಳಿಗಳನ್ನು ತನ್ನ ವಾರ್ಷಿಕ ವರದಿ ಅಥವಾ ಯಾವುದೇ ವಿಶೇಷ ವರದಿಯಲ್ಲಿ ಸೇರಿಸಬಹುದು.

## ಅಧ್ಯಾಯ-IX

20. **ಆಯೋಗದಿಂದ ಅನೌಪಚಾರಿಕ ಕ್ರಮಗಳು:-** ಆಯೋಗವು ಕಾನೂನಿನ ಮೇರೆಗೆ ಸ್ಪಷ್ಟವಾಗಿ ಉಲ್ಲೇಖಿಸದಂಥ ವಿಷಯಗಳು ಅಥವಾ ಪ್ರಕರಣಗಳ ವಿಶೇಷ ಪ್ರಕರಣಗಳಲ್ಲಿ ಅಂದರೆ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿ ಅಥವಾ ಅಂಥ ವ್ಯಕ್ತಿಗಳ ಸಮೂಹದ ಕ್ಷೇಮಾಭಿವೃದ್ಧಿಯಂಥ ವಿಷಯವಾಗಿದ್ದರೆ ಪತ್ರ ವ್ಯವಹಾರವನ್ನು ಆರಂಭಿಸಬಹುದು ಹಾಗೂ ಈ ವರ್ಗಗಳ ವ್ಯಕ್ತಿಗಳ ಹಿತಾಸಕ್ತಿಯನ್ನು ರಕ್ಷಿಸುವಂತ ತನ್ನ ಅಂತರ್ಗತ ಸಾಮಾರ್ಥ್ಯ ದಲ್ಲಿ ಆಯೋಗಕ್ಕೆ ಅಗತ್ಯವಾಗಿದ್ದರೆ ಕ್ರಮಕೈಗೊಳ್ಳಬಹುದು. ಆಯೋಗದಿಂದ ಬರುವ ಎಲ್ಲಾ ನಿಯತ ಔಪಚಾರಿಕ ಪತ್ರ ವ್ಯವಹಾರಗಳನ್ನು ಸದಸ್ಯ ಕಾರ್ಯದರ್ಶಿಯ ಅಥವಾ ಅಧಿಕೃತ ಅಧಿಕಾರಿಯ ಸಹಿಗಳಿಂದ ಹೊರಡಿಸತಕ್ಕದ್ದು. ಆಯೋಗವು, ತನ್ನ ಸದಸ್ಯ ಕಾರ್ಯದರ್ಶಿಯ ಮೂಲಕ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಿಸಬಹುದು.

21. **ರಾಜ್ಯ ಸರ್ಕಾರದ ನಿಯಮಗಳು, ಇತ್ಯಾದಿಗಳ ಅನ್ವಯಿಸುವಿಕೆ :-**

(1) ರಾಜ್ಯ ಸರ್ಕಾರವು ಹೊರಡಿಸಿದ ಹಾಗೂ ಅನ್ವಯಿಸಬಹುದಾದ ಎಲ್ಲಾ ನಿಯಮಗಳು, ವಿನಿಯಮಗಳು ಹಾಗೂ ಆದೇಶಗಳು ಆಯೋಗಕ್ಕೆ ಸಹ ಅನ್ವಯಿಸತಕ್ಕದ್ದು.

(2) ರಾಜ್ಯ ಸರ್ಕಾರದ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆಗೆ ಸಂಬಂಧಿಸಿದ ಉಪಬಂಧಗಳನ್ನು ಆಯೋಗದಲ್ಲಿನ ಸಂವಾದಿ ಅಧಿಕಾರಿಗಳಿಗೆ ಅನ್ವಯಿಸತಕ್ಕದ್ದು.

22. **ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿಲ್ಲದ ವಿಷಯಗಳ ಬಗ್ಗೆ ತೀರ್ಮಾನ:-** ಉಪಬಂಧವನ್ನು ಕಲ್ಪಿಸಿಲ್ಲದಂತ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನೆಯು ಉದ್ಭವಿಸಿದರೆ, ಅಧ್ಯಕ್ಷರು

ತೀರ್ಮಾನವನ್ನು ಕೋರತಕ್ಕದ್ದು. ಅಧ್ಯಕ್ಷರು ಸೂಕ್ತವೆಂದು ಭಾವಿಸಿದರೆ, ವಿಷಯವನ್ನು ಆಯೋಗದ ಸಭೆಯಲ್ಲಿ ಪರಿಗಣಿಸಬಹುದೆಂದು ನಿರ್ದೇಶಿಸಬಹುದು.

## ಅಧ್ಯಾಯ-X

23. **ಮೌಲ್ಯಮಾಪನ ಮತ್ತು ಅಧ್ಯಯನಗಳು :-**

(1) ಆಯೋಗವು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಸರ್ಕಾರದಲ್ಲಿ ಸರಕುಗಳು ಮತ್ತು ಸೇವೆಗಳನ್ನು ಪಡೆಯುವುದಕ್ಕಾಗಿ ನಿಯಮಿಸಲಾದಂಥ ವಿಧಾನದಲ್ಲಿ ಈ ಸಂಬಂಧದಲ್ಲಿ ಹೊರಡಿಸಲಾದ ನಿರ್ಣಯಗಳ ಮೂಲಕ ರಾಜ್ಯದಲ್ಲಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಸೌಲಭ್ಯಕ್ಕೆ ಯಾವುದೇ ಮೌಲ್ಯಮಾಪನ ಹಾಗೂ ಅಧ್ಯಯನಗಳನ್ನು ಕೈಗೊಳ್ಳಬಹುದು.

(2) ಅಂಥ ಪ್ರತಿಯೊಂದು ಮೌಲ್ಯಮಾಪನ ಹಾಗೂ ಅಧ್ಯಯನಗಳ ತರುವಾಯ ವರದಿಯೊಂದನ್ನು ಆಯೋಗದ ಮುಂದೆ ಮಂಡಿಸತಕ್ಕದ್ದು ಹಾಗೂ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮವನ್ನು ಕೈಗೊಳ್ಳಬಹುದು ಅಥವಾ ಯುಕ್ತ ಕ್ರಮಕ್ಕೆ ಅಧ್ಯಯನದ ವರದಿಯ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸಬಹುದು.

## ಅಧ್ಯಾಯ-XI

24. **ಬಜೆಟ್, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಹಾಗೂ ವಾರ್ಷಿಕ ವರದಿ :-**

(1) ಆಯೋಗದ ಬಜೆಟ್‌ಅನ್ನು ಪ್ರತಿ ವರ್ಷದ ೩೦ನೇ ನವೆಂಬರ್ ಮೊದಲೇ ತಯಾರಿಸತಕ್ಕದ್ದು ಹಾಗೂ ಪ್ರತಿ ವರ್ಷದ ಡಿಸೆಂಬರ್ ಮೊದಲ ವಾರದ ಅವಧಿಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ದ್ವಿಪ್ರತಿಯಲ್ಲಿ ಸಲ್ಲಸತಕ್ಕದ್ದು.

(2) ಆಯ-ವ್ಯಯದ ಅನುಧಾನಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಪಟ್ಟಂಥ ಲೆಕ್ಕಪತ್ರಗಳ ವಿವರಣಾ ಪಟ್ಟಿ ಹಾಗೂ ಆಯ-ವ್ಯಯದ ಅನುಧಾನಗಳ ಸಂಬಂಧದಲ್ಲಿನ ವೆಚ್ಚದ ಲೆಕ್ಕಪತ್ರಗಳ ವಿವರಣಾ ಪಟ್ಟಿ ಹಾಗೂ ಆಯೋಗದ ಎಲ್ಲಾ ಲೆಕ್ಕ ಪತ್ರಗಳನ್ನು, ಕಾಲಕಾಲಕ್ಕೆ ಸರ್ಕಾರದ ನಿರ್ದೇಶನಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.

(3) ಆಯೋಗದ ಲೆಕ್ಕಪತ್ರಗಳನ್ನು ಕರ್ನಾಟಕದ ಮಹಾಲೇಖಪಾಲರ ಮೂಲಕ ಆ ವರ್ಷದಲ್ಲಿ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(4) ಆಯೋಗದ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಧಿನಿಯಮದ 15ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಕಳೆದ ವರ್ಷದ ಅವಧಿಯಲ್ಲಿ ನಡೆಸಿದ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ಲೆಕ್ಕಪತ್ರಗಳನ್ನು ಸೂಚಿಸಿದ ಹಣಕಾಸು ವರ್ಷ

ಪೂರ್ಣಗೊಂಡ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಸರ್ಕಾರವು, ವಿಧಾನಮಂಡಲದ ಉಭಯ ಸದನಗಳ ಮುಂದೆ ಇದನ್ನು ಮಂಡಿಸಬಹುದು.

(೫) ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ಕೂಡಲೇ ಆಯೋಗವು ವಿಧಾನಮಂಡಳದ ಉಭಯ ಸದನಗಳ ಮುಂದೆ ಇದನ್ನು ಮಂಡಿಸಲು ಸರ್ಕಾರದ ಲೆಕ್ಕಪರಿಶೋಧಕರ ವರದಿಯೊಂದಿಗೆ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯ ಪ್ರತಿಯನ್ನು ಕಳುಹಿಸತಕ್ಕದ್ದು.

**೨೫. ಆಯೋಗದ ಮೊಹರು :-** ಆಯೋಗದ ಮೊಹರು ಅಧ್ಯಕ್ಷರು ಈ ಬಗ್ಗೆ ಹೊರಡಿಸಲಾದ ಆದೇಶದ ಮೂಲಕ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ನರಸಿಂಹ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ- ಖಖ

ಸಮಾಜ ಕಲ್ಯಾಣ ಇಲಾಖೆ

# ಅಧ್ಯಾಯ-2

## [ಪ್ರಕರಣ 4[i][b][ii]]

## ಈ ಕೆಳಗಿನಂತೆ ಅಧಿಕಾರಿಗಳ ಕರ್ತವ್ಯಗಳ ವಿವರವನ್ನು ಹುದ್ದೆ ಸಮೇತ ನಮೂದಿಸಿದೆ

| ಕ್ರ. ಸಂ. | ಅಧಿಕಾರಿಗಳ ಹೆಸರು | ಪದನಾಮ | ಹಂಚಿಕೆಯಾಗಿರುವ ಕರ್ತವ್ಯಗಳು |
|---|---|---|---|
| 1. | ಡಾ. ಹೆಚ್.ಎಸ್. ಶಿವರಾಮು | ಕಾರ್ಯದರ್ಶಿ | ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಇಲಾಖಾ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಣೆ |
| 2. | ಶ್ರೀ ವಿರೂಪಾಕ್ಷ | ಸಂಶೋಧನಾಧಿಕಾರಿ | ಮಾಹಿತಿ ಹಕ್ಕುಅಧಿನಿಯಮಡದಿ ಸ್ವೀಕೃತಗೊಳ್ಳುವ ಅರ್ಜಿಗಳ ಪರಿಶೀಲನೆ ನಿಗಧಿತ ದಿನಾಂಕದೊಳಗೆ ಮಾಹಿತಿಗಳನ್ನು ರವಾನಿಸಲು ಕ್ರಮಕೈಗೊಳ್ಳುವುದು |
| 3. | ಶ್ರೀ ಶ್ರೀನಿವಾಸ.ಎ | ಸಹಾಯಕ ನಿರ್ದೇಶಕರು [ವ್ಯವಹಾರಿಕ ] | ➢ ಆಯೋಗಕ್ಕೆ ಸ್ವೀಕೃತಗೊಳ್ಳುವ ದೂರುಗಳ ಪರಿಶೀಲನೆ.<br>➢ ದೂರುಗಳ ಕುರಿತು ಪ್ರತಿವಾದಿಗಳಿಂದ ವರದಿ ಪಡೆಯುವುದು.<br>➢ ಸ್ವೀಕೃತಗೊಳ್ಳುವ ವರದಿಯ ಬಗ್ಗೆ ಪರಿಶೀಲಿಸಿ ಕಡತವನ್ನು ಆಯೋಗದ ನ್ಯಾಯಾಲಯದ ವಿಚಾರಣೆಗೆ ಒಳಪಡಿಸುವುದು. |
| 4. | ಹುದ್ದೆ ಖಾಲಿ | ಅಧ್ಯಕ್ಷರ ಆಪ್ತ-ಕಾರ್ಯದರ್ಶಿ | ➢ ಮಾನ್ಯ ಆಯೋಗದ ಅಧ್ಯಕ್ಷರು ಆಪ್ತ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುವುದು.<br>➢ ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ಭಾವಹಿಸುವುದು.<br>➢ ನ್ಯಾಯಾಲಯದ ವಿಚಾರಣೆಗಳ ಪಟ್ಟಿ ಪರಿಶೀಲಿಸುವುದು.<br>➢ ವಿಚಾರಣಾ ಕಡತಗಳಿಗೆ ದಿನಾಂಕ ನಿಗಧಿಪಡಿಸುವುದು.<br>➢ ಅಧ್ಯಕ್ಷರೊಂದಿಗೆ ಪ್ರವಾಸ ಕಾರ್ಯದರ್ಶಿ ಭಾಗವಹಿಸುವುದು. |

| | | | |
|---|---|---|---|
| | | | ➢ ಅಧ್ಯಕ್ಷರು/ಕಾರ್ಯದರ್ಶಿಗಳು ಸೂಚಿಸುವ ಇತರ ಕರ್ತವ್ಯಗಳು.<br>➢ ಲೆಕ್ಕ ಪತ್ರ ಶಾಖೆ ಮೇಲ್ವಿಚಾರಣೆ |
| 5. | ಶ್ರೀಮತಿ ಚೇತನಾ ಸಿ. ಬಿಳೇಕಲ್ | ಕಛೇರಿ ಅಧೀಕ್ಷಕರು | ➢ ನಗದು ಶಾಖೆಯ ಕರ್ತವ್ಯ ನಿವ�ಹಣೆ<br>➢ ಎಂ.ಪಿಕ್ ತಯಾರಿಕೆ,<br>➢ ವಾರ್ಷಿಕ ವರದಿ ತಯಾರಿಕೆ,<br>➢ ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಮಹಾಲೇಖಪಾಲರ ಅಡಿಟ್ ವರದಿಯ ಉತ್ತರ. |
| 6. | ಶ್ರೀಮತಿ ರೇವತಿ.ಕೆ | ತನಿಖಾ ಸಹಾಯಕರು [ವಿಚಾರಣೆ ಮತ್ತು ಆಡಳಿತ] | ➢ ಆಯೋಗದ ನ್ಯಾಯಾಲಯದ ವಿಚಾರಣೆಗಳ ಕಡತಗಳಲ್ಲಿ ವಾದಿ/ ಪ್ರತಿವಾದಿಗಳಿಗೆ ಸಮನ್ಸ್/ಪತ್ರ ರವಾನಿಸುವುದು.<br>➢ ಪ್ರತಿವಾದಿಗಳು ವಿಚಾರಣೆಗೆ ಹಾಜರಾಗದ ಪಕ್ಷದಲ್ಲಿ ಸದರಿಯವರಿಗೆ ವಾರೆಂಟ್ ಹೊರಡಿಸುವದು.<br>➢ ಕಡತಗಳಲ್ಲಿ ನಿರ್ದೇಶನ ಹೊರಡಿಸುವುದು ಮತ್ತು ಮುಕ್ತಾಯಗೊಳಿಸುವ ಕಾರ್ಯ.<br>➢ ಆಯೋಗದ ಆಡಳಿತ/ಸಿಬ್ಬಂದಿ ಶಾಖೆ, ಕಛೇರಿಯ ಮೇಲ್ವಿಚಾರಣೆ ಜವಾಬ್ದಾರಿ.<br>➢ ಮಾಹಿತಿ ಹಕ್ಕು ಅಧಿನಿಯಮದ ಅರ್ಜಿ ಪರಿಶೀಲನೆ.<br>➢ ಉಚ್ಛ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಪಿಟಿಷನ್‌ಗಳ ಕ್ರೂಢೀಕೃತ ಮಾಹಿತಿ.<br>➢ ಎಲ್.ಎ/ಎಲ್.ಸಿ ಪ್ರಶ್ನಾವಳಿಗೆ ಉತ್ತರ ತಯಾರಿಸುವುದು.<br>➢ ಆಡಳಿತ ಶಾಖೆಗೆ ಸಂಬಂಧಿಸಿದ ಮಹಾಲೇಖಪಾಲರ ಆಡಿಟ್ ವರದಿಗೆ ಉತ್ತರ. |

| | | | |
|---|---|---|---|
| 7. | ಶ್ರೀಮತಿ ಸುಜಾತ ಆರ್.ಕೆ | ತನಿಖಾ ಸಹಾಯಕರು | ➢ ಸೇವೆ ವ್ಯವಹಾರಿಕ ಶಾಖೆ,<br>➢ ಸುಳ್ಳುಜಾತಿ ಮತ್ತು ಮೀಸಲಾತಿ (ವ್ಯವಹಾರಿಕ ಮತ್ತು ವಿಚಾರಣೆ ಶಾಖೆ) |
| 8. | ಶ್ರೀಮತಿ ಪ್ರೇಮಾ.ಎನ್.ಎಸ್ | ತನಿಖಾ ಸಹಾಯಕರು | ಇತರೆ ವ್ಯವಹಾರಿಕ ಶಾಖೆ<br>ದೌರ್ಜನ್ಯ ವಿಚಾರಣೆ ಶಾಖೆ |
| 7. | ಹುದ್ದೆ ಖಾಲಿ | ಸಹಾಯಕ ಸಾಂಖ್ಯಿಕ ಅಧಿಕಾರಿ | ಆಯೋಗದ ಅಂಕಿ ಅಂಶಗಳ ಕ್ರೂಢೀಕರಣ. |
| 8. | ಶೀಘ್ರಲಿಪಿಗಾರರು | 1 | ಕಛೇರಿ ಪತ್ರ ವ್ಯವಹಾರಗಳ ಬೆರಳಚ್ಚು ಕಾರ್ಯ, ಆಯೋಗದ ಸಭೆಗಳಲ್ಲಿ ಶೀಘ್ರಲಿಪಿ ಕಾರ್ಯದೊಂದಿಗೆ ನಡವಳಿ ತಯಾರಿಸುವುದು, ನ್ಯಾಯಾಲಯದ ಕಾರ್ಯಕಲಾಪ, ಕಡತಗಳಲ್ಲಿ ನಿರ್ದೇಶನ/ಮುಕ್ತಾಯವನ್ನು ಮಾಡುವುದು. ಅಧಿಕಾರಿಗಳು ಸೂಚಿಸುವ ಇತರೆ ಕರ್ತವ್ಯಗಳು. |
| 9. | | 2 | |
| 10 | | 3 | |
| | | 4 | |
| 11 | ಪ್ರಥಮ ದರ್ಜೆ ಸಹಾಯಕರು | 1 | ಜಮೀನು ಶಾಖೆ (ವಿಚಾರಣೆ) |
| 12 | | 2 | ದೌರ್ಜನ್ಯ ಶಾಖೆ [ವಿಚಾರಣೆ] |
| 13. | | 3 | ಇತರೆ [ವಿಚಾರಣೆ] |
| 14. | | 4 | ಸುಳ್ಳುಜಾತಿ ಶಾಖೆ (ವಿಚಾರಣೆ) |
| 15. | | 5 | ಮೀಸಲಾತಿ ಶಾಖೆ [ವಿಚಾರಣೆ] |
| 16. | ದ್ವಿತೀಯ ದರ್ಜೆ ಸಹಾಯಕರು | 1 | ಸೇವೆ ಶಾಖೆ [ವ್ಯವಹಾರಿಕ] |
| 17. | | 2 | ದೌರ್ಜನ್ಯ ಶಾಖೆ [ವ್ಯವಹಾರಿಕ] |
| 18. | | 3 | ಜಮೀನು ಮತ್ತು ಮೀಸಲಾತಿ ಶಾಖೆ [ವ್ಯವಹಾರಿಕ] |
| 19 | | 4 | ಇತರೆ ಮತ್ತು ಸುಳ್ಳುಜಾತಿ ಶಾಖೆ [ವ್ಯವಹಾರಿಕ] |
| 20. | ಬೆರಳಚ್ಚುಗಾರರು | 1 | ಕಛೇರಿ ವ್ಯವಹಾರಿಕ ಪತ್ರಗಳ ಬೆರಳಚ್ಚು ಕಾರ್ಯ |

## ಅಧ್ಯಾಯ-3

[ಪ್ರಕರಣ 4[i][b][iii]]

## ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನದ ವಿವರ

| |
|---|
| 4[i][b][iii] ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವಲ್ಲಿ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಜವಾಬ್ದಾರಿಯು ಆಯೋಗದ ಕಾರ್ಯದರ್ಶಿರವರು ಅಧಿಕಾರ ಹೊಂದಿರುತ್ತಾರೆ. |

## ಅಧ್ಯಾಯ-4

[ಪ್ರಕರಣ 4[i][b][iv]]

## ಕಾರ್ಯನಿರ್ವಹಣೆ ರೂಪಿಸುವ ಸೂತ್ರಗಳು

| | |
|---|---|
| ಸಂಶೋಧನಾಧಿಕಾರಿ ಮತ್ತು ಸಹಾಯಕ ನಿರ್ದೇಶಕರುಗಳು | ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಕಾರ್ಯಗಳ ನಿರ್ವಹಣೆ ಮತು ಅದನ್ನು ರೂಪಿಸುವ ಸೂತ್ರಗಳನ್ನು ಸುಗಮ ಆಡಳಿತ ನಿರ್ವಹಣೆಗೆ ಸರ್ಕಾರ ನಿಗಧಿಪಡಿಸಿರುವ ಕಛೇರಿ ಕೈಪಿಡಿಯ ಪ್ರಕಾರ ನಿಯಮಗಳನ್ನು ಪಾಲಿಸಿ ಕಾರ್ಯದರ್ಶಿಯವರಿಗೆ ಸಹಕರಿಸಿರುತ್ತಾರೆ. |

## ಅಧ್ಯಾಯ-5

[ಪ್ರಕರಣ 4[i][b][v] & [vi]]

## ನಿಯಮಗಳು, ಅಧಿಸೂಚನೆ, ಕೈಪಿಡಿಗಳು ಮತ್ತು ದಾಖಲೆಗಳು

ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳನ್ನು, ಅಧಿಸೂಚನೆಗಳನ್ನು, ಕೈಪಿಡಿಗಳನ್ನು ಮತ್ತು ದಾಖಲೆಗಳ ವಿವರಗಳು.

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧಿಸೂಚನೆ ಸಂಖ್ಯೆ. ಸಂವ್ಯಶಾಇ 58 ಶಾಸನ 2011, ಬೆಂಗಳೂರು ದಿನಾಂಕ: 11 ಸೆಪ್ಟಂಬರ್ 2002 ಮತ್ತು ನಿಯಮಾವಳಿ ಸಂಖ್ಯೆ. ಎಸ್‌ಡಬ್ಲ್ಯೂಡಿ 199 ಎಸ್ಎಡಿ 2010 ಬೆಂಗಳೂರು, ದಿನಾಂಕ: 21-11-2012, ಕೆಸಿಎಸ್ಆರ್, ಕೆಎಫ್‌ಸಿ, ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳು

## ಅಧ್ಯಾಯ-6

### [ಪ್ರಕರಣ 4[i][b] v & i]

## ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳು

ಕಛೇರಿ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧಿಸೂಚನೆ ಮತ್ತು ಅಧಿನಿಯಮ, ಕಛೇರಿಯಲ್ಲಿ ವಿವಿಧ ಯೋಜನೆಗಳ ಸಂಬಂಧಿಸಿದ ಸರ್ಕಾರ ಆದೇಶಗಳು/ಸುತ್ತೋಲೆಗಳು, ಇಲಾಖೆ ಕೈಪಿಡಿ, ಕಛೇರಿ ಕೈಪಿಡಿ, ದೌರ್ಜನ್ಯ ತಡೆ ಕಾಯ್ದೆ, ನಾಗರೀಕ ಹಕ್ಕು ಸಂರಕ್ಷಣಾ ಅಧಿನಿಯಮಗಳು, ವಿಷಯ ನಿರ್ವಾಹಕರ ದಿನಚರಿ ಮುಂತಾದವುಗಳನ್ನು ನಿರ್ವಹಿಸಲಾಗುತ್ತದೆ.

## ಅಧ್ಯಾಯ-7

[ಪ್ರಕರಣ 4[i][b][vii]]

## ಕಾರ್ಯನೀತಿಯನ್ನು ರೂಪಿಸುವುದು ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಗಳು

| ಕ್ರ. ಸಂ. | ಕಾರ್ಯಗಳು/ಸೇವೆಗಳು | ಸಮಾಲೋಚನೆಗಾಗಿ ಮಾಡಿಕೊಂಡಿರುವ ವ್ಯವಸ್ಥೆಗಳು ಅಥವಾ ನಿರ್ಣಯ ರಚನೆ ಸಂಬಂಧ ಸಾರ್ವಜನಿಕರ ಪ್ರಾತಿನಿಧ್ಯತೆ | ಸಮಾಲೋಚನೆಗಾಗಿ ಮಾಡಿಕೊಂಡಿರುವ ವ್ಯವಸ್ಥೆಗಳು ಅಥವಾ ನಿರ್ಣಯ ಜಾರಿಯ ಸಂಬಂಧ ಸಾರ್ವಜನಿಕರ ಪ್ರಾತಿನಿಧ್ಯತೆ. |
|---|---|---|---|
| | | | |
| | | | |
| | | | |
| | | | |

## ಅಧ್ಯಾಯ-೮

[ಪ್ರಕರಣ 4[i][b][viii]]

## ಸಾರ್ವಜನಿಕ ಪ್ರಾಧಿಕಾರದ ಭಾಗವಾಗಿ ರಚಿತವಾದ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರ ನಿಕಾಯಗಳೂ

| ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಇತ್ಯಾದಿಗಳ ಹೆಸರು | ರಚನೆ | ಅಧಿಕಾರ ಮತ್ತು ಕಾರ್ಯನಿರ್ವಹಣೆ | ಸಾರ್ವಜನಿಕರಿಗೆ ಅದರ ಸಭೆಗಳು ತೆರದಿವೆಯೇ/ ಅದರ ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವೇ |
|---|---|---|---|
| | | | |
| | | | |
| | | | |
| | | | |

# ಅಧ್ಯಾಯ-೨

## [ಪ್ರಕರಣ 4[1][b][ix]]

## ವಿವಿಧ ಮಟ್ಟಗಳಲ್ಲಿ, ವಿವಿಧ ಘಟಕಗಳು ಅಥವಾ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಮಾಹಿತಿ

| ಕ್ರ. ಸಂ. | ಅಧಿಕಾರಿಗಳ/ ನೌಕರರ ಹೆಸರು | ಪದನಾಮ | ಕಛೇರಿಯ ವಿಳಾಸ | ಸಂಪರ್ಕ ಸಂಖ್ಯೆ |
|---|---|---|---|---|
| 1. | ಡಾ. ಹೆಚ್.ಎಸ್. ಶಿವರಾಮು | ಕಾರ್ಯದರ್ಶಿ | ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ನಂ. 14/3, 2ನೇ ಮಹಡಿ, ಅರವಿಂಧ ಭವನ, ನೃಪತುಂಗ ರಸ್ತೆ, ಬೆಂಗಳೂರು-560001. | 080-22118484 |
| 2. | ಶ್ರೀ ವಿರೂಪಾಕ್ಷ | ಸಂಶೋಧನಾಧಿಕಾರಿ | | |
| 3. | ಹುದ್ದೆ ಖಾಲಿ | ಅಧ್ಯಕ್ಷರ ಆಪ್ತ ಕಾರ್ಯದರ್ಶಿ | | 080-22249705 |
| 4. | ಶ್ರೀ ಶ್ರೀನಿವಾಸ್.ಎ | ಸಹಾಯಕ ನಿರ್ದೇಶಕರು (ವ್ಯವಹಾರಿಕ) | | 080-22249704 |

# ಅಧ್ಯಾಯ-10

## [ಪ್ರಕರಣ 4[1][b][x]]

## ವಿನಿಮಯಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯು ಸೇರಿದಂತೆ ಅಧಿಕಾರಿಗಳು ಮತ್ತು ನೌಕರರುಗಳ ಮಾಸಿಕ ಸಂಭಾವನೆ

| ಕ್ರ. ಸಂ. | ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ | ಪದನಾಮ | ಮಾಸಿಕ ವೇತನ ರೂ.ಗಳಲ್ಲಿ |
|---|---|---|---|
| 1. | ಡಾ. ಹೆಚ್.ಎಸ್. ಶಿವರಾಮು | ಕಾರ್ಯದರ್ಶಿಗಳು | |
| 2. | ಶ್ರೀ ವಿರೂಪಾಕ್ಷ | ಸಂಶೋಧನಾಧಿಕಾರಿ | |
| 3. | ಶ್ರೀ ಶ್ರೀನಿವಾಸ.ಎ | ಸಹಾಯಕ ನಿರ್ದೇಶಕರು | |
| 4. | ಹುದ್ದೆ ಖಾಲಿ | ಸಹಾಯಕ ನಿರ್ದೇಶಕರು | |
| 5. | ಹುದ್ದೆ ಖಾಲಿ | ಅಧ್ಯಕ್ಷರ ಆಪ್ತ ಕಾರ್ಯದರ್ಶಿ | |
| 6. | ಶ್ರೀಮತಿ ಚೇತನಾ ಸಿ. ಬಿಳೇಕಲ್ | ಕಛೇರಿ ಅಧೀಕ್ಷಕರು | |
| 7. | ಶ್ರೀಮತಿ ರೇವತಿ .ಕೆ. | ತನಿಖಾ ಸಹಾಯಕರು | |
| 8. | ಶ್ರೀಮತಿ ಸುಜಾತ.ಆರ್.ಕೆ | ತನಿಖಾ ಸಹಾಯಕರು | |
| 9. | ಶ್ರೀಮತಿ ಪ್ರೇಮಾ ಎನ್.ಎಸ್ | ತನಿಖಾ ಸಹಾಯಕರು | |
| 10. | ಶ್ರೀ ಎಸ್. ತಿಪ್ಪೇಸ್ವಾಮಿ | ಪ್ರ.ದ.ಸ. | |
| 11. | ಶ್ರೀಮತಿ ಕಲಾವತಿ ಎಂ.ಹೆಚ್ | ಪ್ರ.ದ.ಸ. | |
| 12. | ಹುದ್ದೆ ಖಾಲಿ-3 | ಪ್ರ.ದ.ಸ. | |
| 13. | ಶ್ರೀ ಕಿರಣ ಹಜೇರಿ | ಶೀಘ್ರಲಿಪಿಗಾರರು | |
| 14. | ಹುದ್ದೆ ಖಾಲಿ-3 | ಶೀಘ್ರಲಿಪಿಗಾರರು | |
| 15. | ಹುದ್ದೆ ಖಾಲಿ-4 | ದ್ವಿತೀಯ ದರ್ಜೆ ಸಹಾಯಕರು | |
| 16. | ಲಿಲ್ಲಿ ಡಿ' ಮೆಲ್ಲೋ | ಬೆರಳಚ್ಚುಗಾರರು | |
| 17. | ಹುದ್ದೆ ಖಾಲಿ-2 | ದ್ವಿ.ದ.ಸ | |
| 18. | ಶ್ರೀ ಬಾಲಯ್ಯ | ವಾಹನ ಚಾಲಕರು | |
| 19. | ಶ್ರೀ ರವೀಂದ್ರ ಕುಮಾರ್ (ನಿಯೋಜನೆ) | 'ಡಿ' ಗ್ರೂಪ್ | |
| 20. | ಶ್ರೀ ಶ್ರೀನಿವಾಸ್.ಕೆ.ಎಸ್ (ನಿಯೋಜನೆ) | 'ಡಿ' ಗ್ರೂಪ್ | |
| 21. | ಹುದ್ದೆ ಖಾಲಿ-2 | ಡಿ' ಗ್ರೂಪ್ | |

## ಅಧ್ಯಾಯ-11 ರಿಂದ 15 ಮತ್ತು 17

## ಪ್ರಕರಣ 4[1][b][xi] ರಿಂದ [xv] ಮತ್ತು [xvi]

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಶ್ರೇಯೋಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿದ್ದು, ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿರುತ್ತದೆ. ಆಯೋಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ದೂರು ಅರ್ಜಿಯನ್ನು ವಿಚಾರಣೆ ನಡೆಸಲಾಗುತ್ತದೆ. ಆಯೋಗದಲ್ಲಿ ಯಾವುದೇ ಯೋಜನೆಗಳಿರುವುದಿಲ್ಲ. ಇದರಿಂದ ಪ್ರಕರಣ 4[1][b][xi] ರಿಂದ [xv] ಮತ್ತು [xvi] ರವರೆಗೆ ಅನ್ವಯಿಸುವುದಿಲ್ಲ.

## ಅಧ್ಯಾಯ-16

### [ಪ್ರಕರಣ 4[1][b][xvi]]

### ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು ಪದನಾಮಗಳು ಮತ್ತು ಇತರ ವಿವರಗಳು

| | | |
|---|---|---|
| 1. | **ಕಾರ್ಯದರ್ಶಿಗಳು**<br>ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು<br>ದೂರವಾಣಿ : 080-22249704<br>E-mail : karnatakastatecomscst@yahoo.in | ಪ್ರಥಮ ಮೇಲ್ಮನವಿ ಪ್ರಾಧಿಕಾರಿ |
| 2. | **ಶ್ರೀ ವಿರೂಪಾಕ್ಷ**<br>ಸಂಶೋಧನಾಧಿಕಾರಿಗಳು<br>ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು<br>ದೂರವಾಣಿ : 080-22249704 | ಸಾರ್ವಜನಿಕ ಮಾಹಿತಿ ಅಧಿಕಾರಿ |
| 3. | **ಶ್ರೀ ಶ್ರೀನಿವಾಸ.ಎ**<br>ಸಹಾಯಕ ನಿರ್ದೇಶಕರು<br>ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು<br>ದೂರವಾಣಿ : 080-22249704 | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ |